27TH YEAR OF PUBLICATION. PHONE 728 ಬೆಲೆ: ಎರಡಾಣೆ.

ಪ್ರಭಾತ

ಸಂಪುಟ: ೨೭. ಸಂಚಿಕೆ: ೩೯. 5—11—1961 Vol. XXVII. No. 39

PRABHAT ✻ KANNADA WEEKLY ✻ MANGALORE

ಮಹಾಭಾರತ ಕಥಾಮೃತ

(ಲೇಖಕ: ಶ್ರೀ ಕೊ. ಶ. ಕಾರಂತ, ಬಿ.ಎ., ಬಿ.ಎಲ್., ಎಡ್ವೊಕೇಟ್, ಮಂಗಳೂರು.)

ಅರ್ಜುನನ ದಿಗ್ವಿಜಯ

ಅನಂತರ ಅರ್ಜುನನು ಅಗ್ರಜ ಯುಧಿಷ್ಠಿರನನ್ನು ಅಭಿವಂದಿಸಿ ಈ ಪ್ರಕಾರ ನುಡಿದನು: "ರಾಜಶ್ರೇಷ್ಠ! ನಿನ್ನ ಇಷ್ಟವಾದ ರಾಜಸೂಯವನ್ನು ನೆರವೇರಿಸಲು ರಾಜಕೋಶವು ಪರಿವರ್ಧನಗೊಳ್ಳಬೇಕು. ಆದ್ದರಿಂದ ಸಮಸ್ತ ನೃಪೋತ್ತಮರನ್ನೆಲ್ಲಾ ಜಯಿಸಿ ಕರವನ್ನು ಸಂಗ್ರಹಿಸುವುದು ಅನಿವಾರ್ಯವಾಗಿದೆ. ನಮಗೆ ಶ್ರೀಕೃಷ್ಣನ ಸಹಾಯ, ದಿವ್ಯ ಶಸ್ತ್ರಾಸ್ತ್ರಗಳ ಸಂಪತ್ತಿರುವುದರಿಂದ ಉತ್ತರ ಭೂಭಾಗವನ್ನು ದಿಗ್ವಿಜಯಮಾಡಲು ಅನುಜ್ಞೆಯನ್ನೀಯಬೇಕು. ಶುಭಮುಹೂರ್ತ ತಿಥಿ ಮತ್ತು ನಕ್ಷತ್ರದಲ್ಲಿ ವಿಜಯಯಾತ್ರೆಯನ್ನು ಮಾಡಬೇಕೆಂದಿರುವೆನು."

ಈ ಮಾತನ್ನು ಕೇಳಿ ಕುರುಶ್ರೇಷ್ಠ ಧರ್ಮರಾಜನು ಬಹಳ ಪ್ರಸನ್ನನಾದನು. ಆಗ ಅಲ್ಲಿ ಉಪಸ್ಥಿತರಾಗಿದ್ದ ಮಹರ್ಷಿ ವ್ಯಾಸ, ಧೌಮ್ಯ ಆದಿ ಮಹರ್ಷಿಗಳೂ ಹರ್ಷಿತರಾದರು. ಮಹಾ ಬುದ್ಧಿಶಾಲಿಯಾದ ವ್ಯಾಸ ಮಹರ್ಷಿಗಳು ಅರ್ಜುನನ ಕುರಿತು ಹೀಗೆ ಹಿತವಚನಗಳನ್ನಾಡಿದರು. "ಕುಂತೀನಂದನ ಅರ್ಜುನ! ಅಖಿಲ ಪೃಥ್ವಿಯನ್ನು ಜಯಿಸಲು ನೀನೊಬ್ಬನೇ ಸಮರ್ಥನಾಗಿರುವಿ. ಆದ್ದರಿಂದ ನಿಮ್ಮ ಪಿತ ಪಾಂಡು ನಿಮ್ಮಂತಹ ಮಕ್ಕಳನ್ನು ಪಡೆದಿರುವುದರಿಂದ ಬಹಳ ಧನ್ಯನೆಂದೇ ತಿಳಿಯಬೇಕು. ಸಾರ್ವಭೌಮ ಸಮ್ರಾಟ ಪದವಿಯನ್ನು ನಿಮ್ಮೆಲ್ಲರ ಪರಾಕ್ರಮದಿಂದ ನಿಮ್ಮ ಅಗ್ರಜ ಯುಧಿಷ್ಠಿರನು ಶೀಘ್ರದಲ್ಲಿ ಪಡೆಯುವಂತಾಗಲಿ. ಆದ್ದರಿಂದ ನೀನು ಉತ್ತರ ದಿಕ್ಕಿನ ಯಾತ್ರೆಯನ್ನು ಮಾಡುವುದು ಉತ್ತಮವೇ. ರಾಜಾಧಿರಾಜರನ್ನೆಲ್ಲಾ ಜಯಿಸಿ ಅಪಾರ ರತ್ನರಾಶಿಯನ್ನು ತರುವುದಕ್ಕೆ ನೀನು ಸಮರ್ಥನಾಗೆಂದು ನಾವು ಆಶೀರ್ವದಿಸುತ್ತೇವೆ. ಭರತಕುಲ ಭೂಷಣನಾದ ಭೀಮಸೇನನು ಪೂರ್ವಯಾತ್ರೆಯನ್ನು ಮಾಡಲಿ. ಮಹಾರಥಿ ಸಹದೇವನು ದಕ್ಷಿಣ ದಿಕ್ಕಿಗೂ ನಕುಲನ ಪಶ್ಚಿಮ ದಿಕ್ಕಿಗೂ ದಿಗ್ವಿಜಯಕ್ಕೆ ಹೊರಡಲಿ."

ವ್ಯಾಸ ಮಹರ್ಷಿಗಳ ಈ ಮಾತನ್ನು ಕೇಳಿ ಪಾಂಡವರು ಬಹಳ ಹರ್ಷಗೊಂಡು "ಮುನಿಶ್ರೇಷ್ಠರೇ! ತಮ್ಮ ಆಜ್ಞೆಯಂತೆಯೇ ಆಗಲಿ" ಎಂದು ಶಿರಬಗ್ಗಿ ನಮಿಸಿದರು. ವ್ಯಾಸವರ್ಯರ ಆದೇಶಪ್ರಕಾರ ಅರ್ಜುನನು ಅಪಾರ ಚತುರಂಗ ಸೇನಾ ಸಮೇತ ಅಗ್ನಿದೇವನು ಕೊಟ್ಟ ದಿವ್ಯ ರಥವನ್ನೇರಿ ಉತ್ತರದ ದಿಗ್ವಿಜಯಕ್ಕೆ ಪ್ರಸ್ಥಾನಗೈದನು. ಭೀಮಸೇನನು ಪೂರ್ವ ದಿಕ್ಕಿಗೂ, ಸಹದೇವನು ದಕ್ಷಿಣ ದಿಕ್ಕಿಗೂ ಮತ್ತು ನಕುಲನು ಪಶ್ಚಿಮ ದಿಕ್ಕಿಗೂ ದಿಗ್ವಿಜಯಕ್ಕೆ ವಿಶಾಲ ಸೇನೆಯೊಡಗೂಡಿ ಹೊರಟುಹೋದರು.

ಅವರ ದಿಗ್ವಿಜಯ ಯಾತ್ರೆಯನ್ನು ಸಂಕ್ಷೇಪವಾಗಿ ಕೇಳಬೇಕೆಂಬ ಕುತೂಹಲ ಎಲ್ಲವರಿಗೂ ಇರಬೇಕೆಂದು ನಿರೂಪಣೆಗೆ ಆರಂಭಿಸುವ. ಇದರಿಂದ ಭಾರತದೇಶದ ವಿವಿಧ ದೇಶ ವಿಭಾಗಗಳ ಸಂಪೂರ್ಣ ವರ್ಣನೆಯನ್ನು ಮಾಡಿದಂತಾಗುವುದು.

ಮಹಾಪರಾಕ್ರಮಿಯಾದ ಧನಂಜಯನು ಉತ್ತರಾಭಿಮುಖವಾಗಿ ಯಾತ್ರಿತನಾಗಿ ಆದಿಯಲ್ಲಿ ಕುಲಿಂದ ದೇಶದ ಮೇಲೆ ದಿಗ್ವಿಜಯ ಮಾಡಿ ಅದರ ರಾಜನನ್ನು ಸೋಲಿಸಿದನು. ಅನಂತರ ಕಾಲಕೂಟ ಆನರ್ತ ಮೊದಲಾದ ರಾಜ್ಯಗಳು ಅರ್ಜುನನ ವಶವಾದವು. ಶಾಲಕದ್ವೀಜ ರಾಜನಾದ ಪ್ರತಿವಿಂಧ್ಯನು ಮತ್ತು ಅದರ ಸಮೀಪ ಇರುವ ಸಪ್ತ ದ್ವೀಪಗಳ ನೃಪರೊಡನೆ ಭಯಂಕರ ಯುದ್ಧವನ್ನು ಮಾಡಿ ಧನುರ್ಧರರಲ್ಲಿ ಶ್ರೇಷ್ಠನಾದ ಧನಂಜಯನು ಅವರೆಲ್ಲರನ್ನೂ ಸೋಲಿಸಿದನು. ಆಮೇಲೆ ಪ್ರಾಗ್‌ಜ್ಯೋತಿಷಪುರದ ಮೇಲೆ ಕುರುಸೇನೆಯು ಆಕ್ರಮಣಮಾಡಿತು. ಆ ರಾಜ್ಯವನ್ನು ಆಳುತ್ತಿದ್ದ ಭಗದತ್ತನಿಗೂ ಅರ್ಜುನನಿಗೂ ಘೋರ ಸಂಗ್ರಾಮವು ಎಂಟು ದಿನಗಳ ವರೆಗೆ ನಡೆಯಿತು. ಕಿರಾತ, ಚೀನ ಮೊದಲಾದ ದೇಶದವರು ಭಗದತ್ತನಿಗೆ ನೆರವಾದರು. ಭಗದತ್ತನು ಮಹಾಪರಾಕ್ರಮಿ ಅರ್ಜುನನ ಸಾಹಸವನ್ನು ನೋಡಿ ಹರ್ಷಿತನಾಗಿ, "ಮಹಾಬಾಹು ಕುರ ನಂದನ! ನೀನು ಸಮರದಲ್ಲಿ ಶೋಭಿಸುವ ಶೂರ ವೀರನಾಗಿರುವಿ. ನಿನ್ನ ಪರಾಕ್ರಮಕ್ಕೆ ನಾನು ಮೆಚ್ಚಿರುವೆನು. ನಿನ್ನಾಕಾಂಕ್ಷೆ ಏನೆಂದು ತಿಳುಹಿಸಿದರೆ ನಾನು ನೆರವೇರಿಸುವೆನು" ಎಂದನು.

ಆ ಮಾತಿಗೆ ಅರ್ಜುನನು, "ಮಹಾರಾಜ! ಕುರುಕುಲರತ್ನ ರಾಜ ಯುಧಿಷ್ಠಿರನು ಚಕ್ರವರ್ತಿ ಸಮ್ರಾಟನು ಆಗಬೇಕಾಗಿದೆ. ಅದಕ್ಕಾರಣ ರಾಜಸೂಯ ಯಜ್ಞವನ್ನು ನೆರವೇರಿಸಬೇಕಾಗಿದೆ. ಅದಕ್ಕೆ ನೀನು ಪ್ರೇಮಪೂರ್ವಕ ಕರವನ್ನೀಯಬೇಕೆಂಬುದೇ ನನ್ನಾಕಾಂಕ್ಷೆಯಾಗಿದೆ" ಎಂದನು

"ಕುಂತೀಕುಮಾರ! ನಿನ್ನ ಇಷ್ಟಾರ್ಥವನ್ನು ನೆರವೇರಿಸುವುದು ಎಷ್ಟರ ಕೆಲಸ" ಎಂದು ಭಗದತ್ತನು ರತ್ನರಾಶಿಯನ್ನು ಕರವಾಗಿ ಕೊಟ್ಟು ಅರ್ಜುನನನ್ನು ಬೀಳ್ಕೊಟ್ಟನು.

ಅನಂತರ ಅಂತರ್ಗಿರಿ, ಬಹಿರ್ಗಿರಿ ಮತ್ತು ಉಪಗಿರಿ ಎಂಬ ಪ್ರದೇಶಗಳನ್ನು ಜಯಿಸಿ ಕಪ್ಪಕಾಣಿಕೆಗಳನ್ನು ಪಡೆದು ಉಲೂಕ ರಾಜ್ಯದ ಬೃಹಂತನ ಮೇಲೆ ಯುದ್ಧವನ್ನು ಅರ್ಜುನನು ಸಾರಿದನು. ಪರ್ವತರಾಜ ಬೃಹಂತನು ಸೋತು ಎಲ್ಲ ಪ್ರಕಾರ ರತ್ನಗಳನ್ನು ಕೊಟ್ಟನು. ಆದ್ದರಿಂದ ಅರ್ಜುನನು ರಾಜ್ಯವನ್ನು ಅವನಿಗೆ ಬಿಟ್ಟುಕೊಟ್ಟು ಮುಂದೆ ಸೇನಾಬಿಂದುಪುರದ ಮೇಲೆ ಆಕ್ರಮಣ ಮಾಡಿದನು. ಕ್ಷಿಪ್ರದಲ್ಲಿಯೇ ರಾಜನು ಸೋತುಹೋದನು. ಅನಂತರ ಮೋದಾಪುರ, ವಾಮದೇವ, ಸುದಾಮಾ ಸುಸಂಕಲ ಮತ್ತು ಉಲೂಕ ಮೊದಲಾದ ರಾಜ್ಯಗಳನ್ನು ಅರ್ಜುನನು ತನ್ನ ಅಧೀನಮಾಡಿದನು. ಮುಂದೆ ವಿಜಯ ಜಯಭೇರಿಯನ್ನು ಮೊಳಗುತ್ತ ಅರ್ಜುನನು ಕಾಶ್ಮೀರದ ಕ್ಷತ್ರಿಯ ವೀರರೆಲ್ಲರನ್ನೂ ದಶಮಂಡಲಾಧೀಶರನ್ನು ಜಯಿಸಿದನು. ತ್ರಿಗರ್ತ ದಾರ್ವ, ಕೋಕನದ ಆದಿ ಸರ್ವ ಕ್ಷತ್ರಿಯ ನರೇಶಗಣಗಳು ಅರ್ಜುನನ ಶರಣಾಗತರಾದರು.

ಅರ್ಜುನನು ಅನಂತರ ಧವಲಗಿರಿಯನ್ನು ದಾಟಿ ಪುತ್ರದ್ವಾರ ಕಿಂಪುರುಷ ಪ್ರದೇಶವನ್ನು ಪ್ರವೇಶಿಸಿದನು. ಕಿನ್ನರರ ಈ ಪ್ರದೇಶವನ್ನು ಜಯಿಸಿ ಮುಂದೆ ಮಾನಸ ಸರೋವರವನ್ನು ಸೇರಿ, ಹಾಟಕ ಎಂಬ ಗಂಧರ್ವನಗರವನ್ನು ಪರಾಧೀನ ಮಾಡಿ. ತಿತ್ತಿರಿ, ಕಲ್ಮಾಷ ಮತ್ತು ಮಂಡೂಕ ಎಂಬ ಉತ್ತಮ ಅಶ್ವ (ಕುದುರೆ)ಗಳನ್ನು ವಶಪಡಿಸಿಕೊಂಡು ಹೇಮಕೂಟ ಪರ್ವತವನ್ನು ಉತ್ತರಿಸಿ ಹರಿವರ್ಷವನ್ನು ಆಕ್ರಮಿಸಿ, ಮಹಾಮೇರು ಪರ್ವತವನ್ನು ಸಂದರ್ಶಿಸಿ, ಸ್ವರ್ಗಲೋಕ ಪರ್ಯಂತ ವ್ಯಾಪಿಸಿರುವ ಜಂಬೂವೃಕ್ಷವನ್ನು ನೋಡಿ, ಅಲ್ಲಿಯ ಅಥನೀಯ ಸೃಷ್ಟಿ ಸೌಂದರ್ಯ ಬೆಡಗನ್ನೂ ನೋಡಿ ಸವ್ಯಸಾಚಿ ಅರ್ಜುನನು ಪರಮಾಶ್ಚರ್ಯವನ್ನು ಹೊಂದಿದನು. ಅಲ್ಲಿಂದ ಪಶ್ಚಿಮಾಭಿಮುಖನಾಗಿ ಸಂಚರಿಸುತ್ತ, ಅರ್ಜುನನು ಅಪಾರ ಮತ್ತು ದುರ್ಲಭವಾದ ರತ್ನರಾಶಿಗಳನ್ನು ಪಡೆದು ಮಧ್ಯವರ್ತಿಯಾದ ಇಳವೃತ ಪರ್ವತಕ್ಕೆ ಹಿಂತಿರುಗಿದನು.

ಅನಂತರ ಶತ್ರುದಮನ ಅರ್ಜುನನು ಪೂರ್ವ ಪ್ರದೇಶಗಳ ಆಕ್ರಮಣಮಾಡಿದನು. ಮೇರು ಮತ್ತು ಮಂದರಾಚಲ ಇವುಗಳ ಮಧ್ಯ ಹರಿಯುತ್ತಿರುವ ಶೈಲೋದ ನದಿಯ ಉಭಯತಟಗಳಲ್ಲಿ

(9ನೇ ಪುಟಕ್ಕೆ ಮುಂದುವರಿದಿದೆ.)

ಪ್ರಭಾತ

ಸಂಪುಟ: ೨೭. ಸಂಚಿಕೆ: ೩೯. 5–11–1961 Vol. XXVII. No. 39.

ಬೆಂಗಳೂರಿನಲ್ಲಿ ರಾಜ್ಯೋತ್ಸವ

"ನಮ್ಮ ಇತಿಹಾಸದಿಂದ ಸ್ಫೂರ್ತಿಪಡೆಯೋಣ."

ಬಿ. ಡಿ. ಜತ್ತಿ.

"ಭಾವ ಐಕ್ಯತೆ ನಿಧಾನವಾಗಿದೆ."

ನಿಜಲಿಂಗಪ್ಪ.

"ನೃಪತುಂಗನ ಕನಸು ಬಹ್ವಂಶ ನನಸಾಯಿತು."

ಕೆ. ಎಸ್. ಧರಣೇಂದ್ರಯ್ಯ.

"ಕರ್ಣಾಟಕದ ಇತಿಹಾಸದಿಂದ ನಾವು ಸ್ಫೂರ್ತಿಪಡೆದು ನಮ್ಮ ಮುಂದಿನ ಸಮಸ್ಯೆಗಳಿಗೆ ಪರಿಹಾರ ಕೊಂಡುಕೊಳ್ಳಬೇಕಾಗಿದೆ. ನಮ್ಮ ನಾಡಿನ ಐತಿಹ್ಯ ಪರಂಪರೆ—ದೊಡ್ಡದು; ಅವನ್ನು ಶೋಭಾಯಮಾನವಾಗಿ, ಭವ್ಯವಾಗಿ ರೂಪಿಸಿ ತರಲು ಪ್ರಾಮಾಣಿಕವಾಗಿ ತ್ರಿಕರಣಪೂರ್ವಕವಾಗಿ ಎಲ್ಲ ಕನ್ನಡಿಗರು ಏಕಮನಸ್ಸಿನಿಂದ ದುಡಿಯಬೇಕು–" ಎಂಬುದಾಗಿ, ಇದೇ ತಾ. 1ರಲ್ಲಿ, ಬೆಂಗಳೂರಿನ ಪುರಭವನದಲ್ಲಿ ಜರಗಿದ ಕನ್ನಡ ರಾಜ್ಯೋದಯ ಉತ್ಸವದಲ್ಲಿ ಅಧ್ಯಕ್ಷಸ್ಥಾನದಿಂದ ಭಾಷಣಮಾಡುತ್ತ ಮುಖ್ಯಮಂತ್ರಿ ಶ್ರೀ| ಬಿ. ಡಿ. ಜತ್ತಿಯವರು ಜನತೆಯಲ್ಲಿ ವಿನಂತಿಸಿಕೊಂಡರು.

ಸಮಾರಂಭದ ಉದ್ಘಾಟಕರಾಗಿ ಭಾಷಣಮಾಡುತ್ತ ಶ್ರೀ| ಎಸ್. ನಿಜಲಿಂಗಪ್ಪನವರು,—"ಕರ್ಣಾಟಕ ರಚನೆಯ ಯತ್ನವು 1916ರಲ್ಲಿ ಆರಂಭವಾದುದು. ಐದು ವರ್ಷಗಳ ಹಿಂದೆ ಪೂರ್ಣ ರೂಪುಗೊಂಡು ನಮ್ಮ ರಾಜ್ಯ ರಚನೆಯಾಯಿತು; ಈ ನಾಡಿನ ರಚನೆಗೆ ಯತ್ನಿಸಿದವರಲ್ಲಿ ಸಾಹಿತಿಗಳ ಅಂಶದಾನವು ಹಿರಿದು. ಶ್ರೀ| ಆರ್. ಆರ್. ದಿವಾಕರರಂಥವರೂ ಈ ಬಗ್ಗೆ ಯತ್ನ ನಡೆಸಿದವರಲ್ಲಿ ಪ್ರಮುಖರು. ಕರ್ಣಾಟಕ ಪ್ರದೇಶ ಕೊಂಗ್ರೆಸ್ ಕಮಿಟಿಯೂ ಇದರಲ್ಲಿ ಶ್ರಮಿಸಿದೆ—" ಎನ್ನುತ್ತ, "ನಮ್ಮ ನಾಡಿನ ನೈಸರ್ಗಿಕ ಸಂಪತ್ತು ಇತರ ರಾಜ್ಯಗಳೊಡನೆ ತುಲನೆ ಮಾಡುವಾಗ ಹೆಚ್ಚಿಗಿವೆ—ಅದರ ತಕ್ಕ ಉಪಯೋಗವಾಗಬೇಕು. ಭಾವ ಐಕ್ಯತೆಯ ಯತ್ನವು ನಮ್ಮ ನಾಡಿನಲ್ಲಿ, ಆಗಬೇಕಾಗಿದ್ದಷ್ಟು ತ್ವರೆಯಲ್ಲಿ ಆಗಿಲ್ಲ; ಭಾವಐಕ್ಯತೆಯು ನಿಧಾನವಾದರೂ— ವಿರಾಮವಿಲ್ಲದೆ ಈ ಬಗ್ಗೆ ಯತ್ನಗಳು ಮುಂದೊತ್ತಲ್ಪಡಬೇಕು" ಎಂಬುದಾಗಿ ಹೇಳಿದರು.

ಆರಂಭದಲ್ಲಿ ಸ್ವಾಗತಭಾಷಣಮಾಡಿದ, ಸರಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಶಾಖೆಯ ಡೈರೆಕ್ಟರರಾಗಿರುವ ಶ್ರೀ| ಕೆ. ಎಸ್. ಧರಣೇಂದ್ರಯ್ಯನವರು, "ಕಾವೇರಿಯಿಂದ ಗೋದಾವರಿ ವರೆಗೆ ಹರಡಿದ ಕನ್ನಡ ನಾಡಿನ ಕುರಿತಾದ ನೃಪತುಂಗನ ನುಡಿಗಳನ್ನೆತ್ತಿ, "ಇಂದಿಗೆ ಐದು ವರ್ಷಗಳ ಹಿಂದೆ ನೃಪತುಂಗನ ಆ ಕನಸು ನನಸಾಯಿತು" ಎಂದು ಚಲೋ ಶಬ್ದಗಳಲ್ಲಿ ನುಡಿದರು.

ಈ ಸಮಾರಂಭದಲ್ಲಿ, ಸಚಿವರುಗಳಾದ ಶ್ರೀ| ಬಿ. ವೈಕುಂಠ ಬಾಳಿಗ, ಶ್ರೀ| ಚನ್ನಬಸಪ್ಪ ಮೊದಲಾದವರೂ ಉಪಸ್ಥಿತರಿದ್ದರು. ಭಾಷಣಕಾರರಲ್ಲಿ ಶ್ರೀ| ಆರ್. ಆರ್. ದಿವಾಕರ, ಶ್ರೀ| ಎಂ. ವಿ. ಕೃಷ್ಣರಾವ್, ಶ್ರೀ| ಹಾಲಪ್ಪ. ಶ್ರೀ| ಬಿ. ಶಿವಮೂರ್ತಿ ಶಾಸ್ತ್ರಿ ಇವರೂ ಇದ್ದರು. ಶ್ರೀ| ಬಿ. ಎಸ್. ರಾಮಾಚಾರ್, ಎಚ್. ವಿ. ನಾಗರಾಜರಾವ್, ಬ. ನ. ಸುಂದರರಾವ್ ಮತ್ತು ನಾರಾಯಣ ರಾವ್ ಮಾನೆಯವರು ಕನ್ನಡ ಗೀತೆಗಳನ್ನು ಹಾಡಿದರು. "ಉದಯವಾಗಿದೆ ನಮ್ಮ ಚೆಲುವ ಕನ್ನಡ ನಾಡು" ಎಂಬ ಗೀತೆಯನ್ನು ಕುಮಾರಿ ನಾಗರತ್ನ ಮತ್ತು ನಾಗಮಣಿಯವರೂ, "ಹೊತ್ತಿತು ಕನ್ನಡದ ದೀಪ, ಮುಗಿಯಿತು ಶತಮಾನಗಳ ಶಾಪ" ಎಂಬ ಗೀತೆಯನ್ನು ಶ್ರೀ| ರಘುರಾಮ ಮತ್ತು ಶ್ರೀಮತಿ ಶಾಂತಾದೇವಿಯವರೂ ಹಾಡಿದರು. ಭಾಷಣಗಳ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳಾಗಿ, ಸಮಾರಂಭವು ಕೊನೆಗಂಡಿತು.

—

ಪ್ರಧಾನ ಸಚಿವರ ಅಮೇರಿಕಾ ಸಂದರ್ಶನ

ಭಾರತದ ಪ್ರಧಾನ ಸಚಿವ ಪಂಡಿತ ಜವಾಹರಲಾಲ ನೆಹರುಗಳವರು ಸಂಯುಕ್ತ ಅಮೇರಿಕಕ್ಕೆ ಹೊರಟಿರುವರು. ಸಂಯುಕ್ತ ಅಮೇರಿಕಕ್ಕೆ ಪ್ರಧಾನ ಸಚಿವರ ಈ ಭೇಟಿಯು ಮೂರನೆಯದಾಗಿದೆ. ಪ್ರಧಾನ ಸಚಿವರಾದ ನಂತರ 1949ರಲ್ಲಿ ಪ್ರಥಮಬಾರಿ ಮತ್ತು 1956ರಲ್ಲಿ ದ್ವಿತೀಯ ಬಾರಿ ಅವರು, ಅಮೇರಿಕವನ್ನು ಸಂದರ್ಶಿಸಿದಾರೆ.

ಈ ದಿನ (ರವಿವಾರ) ಪಂಡಿತ ನೆಹರುಗಳವರು ನ್ಯೂಯೊರ್ಕಿಗೆ ತಲಪಿ, ಮಾರಣೆ ದಿನ, ರ್ಹೋಡ್ ದ್ವೀಪದ ನ್ಯೂಪೋರ್ಟಿನಲ್ಲಿರುವ ಅಮೇರಿಕಾಧ್ಯಕ್ಷರ ವಿರಾಮ ಕೇಂದ್ರ ಭವನದಲ್ಲಿ, ಅಧ್ಯಕ್ಷ ಕೆನೆಡಿಯವರನ್ನು ಭೇಟಿಯಾಗುವರು. ಅಂದು ಮಧ್ಯಾಹ್ನವೇ ಇಬ್ಬರೂ ವಾಶಿಂಗ್ಟನಿಗೆ ವಿಮಾನ ಮೂಲಕ ತೆರಳುವರು. ಪ್ರಧಾನ ಸಚಿವರಿಗೆ, ವಿಶೇಷ ಅತಿಥಿಗಳ ಬಗ್ಗೆ ಕಾಯ್ದಿಡಲಾದ ಬ್ಲೇರ್‌ಹೌಸಿನಲ್ಲಿ ಆತಿಥ್ಯ ನಡೆವುದು. ಇದೇ ಶುಕ್ರವಾರದ ವರೆಗೆ ಪಂಡಿತ ನೆಹರುಗಳವರು ವಾಶಿಂಗ್ಟನ್ನಿನಲ್ಲಿದ್ದು, ಅಲ್ಲಿಂದ ನ್ಯೂಯೊರ್ಕಿಗೆ ತೆರಳಿ, ಅಲ್ಲಿ ಎರಡು ದಿನಗಳ ಕಾಲ ವಿದ್ಯಾರ್ಥಿಗಳ ಭೇಟಿ, ಉಪಾಹಾರ, ಭೋಜನಕೂಟಗಳು— ರಂಗಭೂಮಿಗೆ ಭೇಟಿ—ಮುಂತಾಗಿ ಅವಿರಾಮವಾಗಿ ನಾನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು. ತಾ. 12ರಂದು ಪ್ರಧಾನ ಸಚಿವರು ಕೆಲಿಫೊರ್ನಿಯಕ್ಕೆ ತೆರಳಿ, ಅಲ್ಲಿ ಎರಡು ದಿನ ಇರುವರು; ಅಲ್ಲಿಂದ ಮೆಕ್ಸಿಕೋ ನಗರಕ್ಕೆ ಹೋಗಿ, ಅಲ್ಲಿ, ತಾ. 17ರ ವರೆಗೆ ಉಳಕೊಂಡು, ತಾ. 17ರಂದು ನ್ಯೂಯೊರ್ಕಿಗೆ ಮರಳಿ ಬಂದು, ಭಾರತಕ್ಕೆ ಹೊರಡುವರು.

ಭಾರತದ ಪ್ರಧಾನ ಸಚಿವರಿಗೆ ಅಮೇರಿಕಾ ಸರಕಾರದ ಪರವಾಗಿ ಸಹಜವಾಗಿ ಒಳ್ಳೆಯ ಸ್ವಾಗತವೇ ದೊರೆವುದಾದರೂ, ಅಲ್ಲಿಯ ಜನತೆಯಲ್ಲಿ, ಇತ್ತೀಚೆಗೆ ಭಾರತದ ಕುರಿತು ತುಸು ಸಿಟ್ಟು ಕೆರಳಿದೆ. ಕೆಲ ಕಾಲದ ಹಿಂದೆ ಬರ್ಲಿನ್ ಬಿಕ್ಕಟ್ಟು ತಲೆದೋರಿದಾಗಲಂತೂ, ಪ್ರಧಾನ ಸಚಿವರು ಆಡಿದ ಒಂದೆರಡು ಮಾತುಗಳು ಅಲ್ಲಿ ವಿರಸವನ್ನುಂಟುಮಾಡಿವೆ. ತರುಣ ಅಧ್ಯಕ್ಷ ಕೆನೆಡಿಯವರು ಅಧಿಕಾರ ವಹಿಸುತ್ತಲೇ ಭಾರತಕ್ಕೆ ಸಹಾಯ ಹೆಚ್ಚಿಸುವ ಉದಾರ ಧೋರಣೆ ತಾಳಿದ್ದಾಗ— ತಾಟಸ್ಥ್ಯದ ಹೆಸರಲ್ಲಿ ಭಾರತವು ಅಮೇರಿಕಕ್ಕೆ ಪ್ರತಿಕೂಲವಾಗಿಯೇ ವರ್ತಿಸುತ್ತಿದೆಯೆಂದೂ, ಸೋವಿಯಟ್ ರಷ್ಯಕ್ಕೆ ಮನನೋಯುವ ಯಾವ ಪ್ರಕರಣದಲ್ಲೂ ಭಾರತವು ದೂರವಿದೆಯೆಂದೂ ಅಥವಾ ರಷ್ಯದ ಪಕ್ಷಪಾತಿಯೆನಿಸುವ ಪ್ರವೃತ್ತಿಯನ್ನು ತೋರುತ್ತಿದೆಯೆಂದೂ ಅಮೇರಿಕದ ಅಧಿಕಾರ ವರ್ಗಕ್ಕೆ ಕೂಡ ಭಾಸವಾಗಹತ್ತಿದೆ. ಅಣುಬಾಂಬುಗಳ ಪ್ರಯೋಗವನ್ನು ರಷ್ಯವು ಆರಂಭಿಸಿದಾಗ ಕಠಿನ ಮಾತುಗಳಲ್ಲಿ ಅದನ್ನು ನಿಷೇಧಿಸುವ ಬದಲಾಗಿ ಅಮೇರಿಕವು ನೆಲದಡಿ ಮಾಡಹೊರಟಿರುವ ಪ್ರಯೋಗಗಳನ್ನು ರಷ್ಯದ ಕೃತ್ಯದೊಡನೆ ಸಮತೋಲನ ಮಾಡಿ ಭಾರತದ ರಕ್ಷಣಾ ಮಂತ್ರಿ ಶ್ರೀ| ಕೃಷ್ಣ ಮೆನೊನರು ಆಡಿದ ನುಡಿಗಳು ಅಮೇರಿಕದ ಮನಸ್ಸನ್ನು ನೋಯಿಸಿವೆ. ಇಂಥ ಪರಿಸ್ಥಿತಿಯಲ್ಲಿ ಪಂಡಿತ ನೆಹರುಗಳವರು ಅಮೇರಿಕವನ್ನು ಸಂದರ್ಶಿಸುತಿದ್ದಾರೆ.

ಈ ಅಸ್ಪಷ್ಟ ವಾತಾವರಣದಲ್ಲಿ ಭಾರತ ಪ್ರಧಾನರು ಈ ಭೇಟಿಯನ್ನು ಕೈಕೊಂಡುದು ನಿರರ್ಥಕ ಎಂದು ಕೆಲವರ ಅಭಿಪ್ರಾಯವಿದೆ. ಆದರೆ, ತಪ್ಪು ಭಾವನೆಗಳಲ್ಲಿ ಎಲ್ಲವೂ ಅಥವಾ ಬಹ್ವಂಶವು ಪರಸ್ಪರ ಭೇಟಿಯಿಂದಲೇ ತಿದ್ದಲ್ಪಡುವುದು. ಪಂಡಿತ ನೆಹರುಗಳವರನ್ನು ಈ ಮೊದಲು, ಅಮೇರಿಕದ ರಾಜಕಾರಣಿಗಳು ಧೀರ ಸತ್ಯಸಂಧನೆಂದು ಗುರುತಿಸಿ, ಗೌರವಿಸಿದ್ದಾರೆ. ಈಗಲಾದರೂ ಆ ಭಾವನೆಯೇ ಪ್ರಧಾನವಾಗಿ ಮೇಲೆದ್ದು ನಿಲ್ಲುವುದೆಂದು ನಮ್ಮ ಅಭಿಪ್ರಾಯ. ಭಾರತದ ನಿಲುವೆಯನ್ನು ಶ್ರೀ| ಕೃಷ್ಣ ಮೆನೊನರಿಗಿಂತ ತಿಳಿಯಾಗಿ ಪಂಡಿತ ನೆಹರುಗಳವರು ವಿವರಿಸಬಲ್ಲವರಾಗಿದ್ದಾರೆ. ಶ್ರೀ| ಮೆನೊನರು ವಾದಿಸುವುದರಲ್ಲಿ ಮೇಲ್ಮೈ ತೋರಿಸಬಹುದು, ಆದರೆ, ಖಚಿತಗೊಳಿಸುವ ಸಾಮರ್ಥ್ಯವು ಪ್ರಧಾನ ಸಚಿವರಲ್ಲೇ ಅಧಿಕವಾಗಿದೆ.

——

ಕನ್ನಡ ರಾಜ್ಯೋದಯ ದಿನಾಚರಣೆ

ಕನ್ನಡ ಸಂಘದ ಆಶ್ರಯದಲ್ಲಿ ನವರಾಜ್ಯೋದಯ ದಿನವು ಮಂಗಳೂರು ಸರಕಾರೀ ಕೊಲೇಜಿನಲ್ಲಿ ಕಳೆದ ತಾ. 1ರಂದು ಆಚರಿಸಲ್ಪಟ್ಟಿತು. 'ಕನ್ನಡ ಸಾಹಿತ್ಯಕ್ಕೆ ದಕ್ಷಿಣ ಕನ್ನಡದ ಕೊಡುಗೆ' ಎಂಬ ವಿಷಯದಲ್ಲಿ ವಿಚಾರಗೋಷ್ಠಿಯೊಂದು ಈ ಸಂದರ್ಭದಲ್ಲಿ ಏರ್ಪಟ್ಟಿತ್ತು.

ದ. ಕ. ಜಿಲ್ಲೆಯಲ್ಲಿ ಪತ್ರಿಕೋದ್ಯಮ ಎಂಬ ವಿಷಯವನ್ನೆತ್ತಿ ಶ್ರೀ| ಬಿ. ಶಂಕರ ಭಟ್ಟರು ವಿಚಾರಗೋಷ್ಠಿಯನ್ನು ಆರಂಭಿಸಿದರು. ಶ್ರೀ| ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರು ಜಿಲ್ಲೆಯ ಕಾವ್ಯಸಾಹಿತ್ಯದ ಕುರಿತಾಗಿಯೂ, ಶ್ರೀ| ಕುಡ್ಪಿ ವಾಸುದೇವ ಶೆಣೈಯವರು ನಾಟಕಕಲೆ ಮತ್ತು ಸಾಹಿತ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಸಲ್ಲಿಸಿದ ಅಂಶದಾನದ ಕುರಿತಾಗಿಯೂ, ಶ್ರೀ| ಪಿ. ಕೆ. ನಾರಾಯಣರು ಗದ್ಯ ಸಾಹಿತ್ಯ ಮತ್ತು ಶ್ರೀ| ಅಮ್ಮೆಂಬಳ ಶಂಕರನಾರಾಯಣರು ತುಳುಸಾಹಿತ್ಯ ಮತ್ತು ಸಂಶೋಧನಾ ಸಾಹಿತ್ಯದ ವಿಚಾರವಾಗಿಯೂ ಭಾಷಣಮಾಡಿ, ದಕ್ಷಿಣ ಕನ್ನಡ ಜಿಲ್ಲೆಯು ಈ ಎಲ್ಲಾ ಕ್ಷೇತ್ರಗಳಲ್ಲಿಯೂ ಕನ್ನಡ ಸಾಹಿತ್ಯಕ್ಕೆ ಉತ್ತಮ ಕೊಡುಗೆಯನ್ನಿತ್ತಿದೆಯೆಂದು ಅಭಿಪ್ರಾಯಪಟ್ಟರು.

ಆರಂಭದಲ್ಲಿ ಶ್ರೀ| ಸಂತೋಷಕುಮಾರ್ ಗುಲ್ವಾಡಿಯವರು ಸ್ವಾಗತಭಾಷಣ ಮಾಡಿ ಅಂತ್ಯದಲ್ಲಿ ಶ್ರೀ| ಬಾಲಕೃಷ್ಣ ಶೆಟ್ಟರು ಧನ್ಯವಾದವಿತ್ತರು.

——

ನಮ್ಮ ಜಿಲ್ಲೆ

ಸ್ಥಾಪನಾದಿನ: ಮಂಗಳೂರು ಹೊಗೆ ಬಜಾರಿನಲ್ಲಿ ಭಾರತೀಯ ಜನಸಂಘದ ಸ್ಥಾಪನಾದಿನವು ಇತ್ತೀಚೆಗೆ ಶ್ರೀ| ರಮೇಶ ಪ್ರಭುರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ| ಪ್ರಭಾಕರ ಘಾಟಿಯವರು ಜನಸಂಘದ ಧ್ಯೇಯಧೋರಣೆಗಳನ್ನು ವಿವರಿಸಿ ಭಾಷಣವಿತ್ತರು.

ಬಿಡುಗಡೆ: ಮಂಗಳೂರು ಅಡಿಕೆ ಗೋದಾಮು ವಂಚನೆ ಆರೋಪದಲ್ಲಿ ಮಂಗಳೂರು ಸೆಶನ್ಸ್ ಜಡ್ಜರು ಆರೋಪಿ ಶ್ರೀ| ದೇವರಾಯ ಕಾಮತರಿಗೆ ಸೆಕ್ಷನ್ 380 ಐ. ಪಿ. ಸಿ ಪ್ರಕಾರ 4 ತಕ್ಷೀರುಗಳಲ್ಲಿ ಎರಡೆರಡು ವರ್ಷಗಳಂತೆ ಕಠಿಣ ಸಜೆ ಮತ್ತು 4,000 ರೂ. ಜುಲ್ಮಾನೆ ವಿಧಿಸಿ ತೀರ್ಪಿತ್ತುದರ ವಿರುದ್ಧ ಆರೋಪಿಯು ಬೆಂಗಳೂರಲ್ಲಿರುವ ಮೈಸೂರು ಹೈಕೋರ್ಟಿಗೆ ಅಪೀಲು ಮಾಡಿದ್ದು, ಸದ್ರಿಯವರನ್ನು ಜಾಮೀನು ಮೇಲೆ ಬಿಡುಗಡೆಗೊಳಿಸಲಾಗಿದೆಯೆಂದು ತಿಳಿದು ಬಂದಿದೆ.

ವಿಶ್ವಸಂಸ್ಥೆ ದಿನಾಚರಣೆ: ಕಳೆದ ತಾ. 26ರಂದು ಕಾರ್ಕಳ ಶ್ರೀ ಭುವನೇಂದ್ರ ಕೊಲೇಜ್ ಯೂನಿಯನಿನ ಆಶ್ರಯದಲ್ಲಿ ವಿಶ್ವಸಂಸ್ಥೆಯ ವಾರ್ಷಿಕ ದಿನವು ಆಚರಿಸಲ್ಪಟ್ಟಿತು. ಶ್ರೀ| ಬೈಕಾಡಿ ವಾಸುದೇವರಾವ್ ಬಿ. ಎ. ಬಿ. ಎಲ್. ರವರು ಮುಖ್ಯ ಅತಿಥಿಗಳಾಗಿದ್ದರು.

ತೈಲ ಶುದ್ಧೀಕರಣ ಕಾರ್ಖಾನೆ: ಮೈಸೂರಲ್ಲಿ ಒಂದು ತೈಲ ಶುದ್ಧೀಕರಣ ಕಾರ್ಖಾನೆಯನ್ನು ಖಾಸಗಿ ವಿಭಾಗದಲ್ಲಿ ಸ್ಥಾಪಿಸುವುದರ ಬಗ್ಗೆ ಮೈಸೂರು ಸರಕಾರವು ಕೇಂದ್ರ ಸರಕಾರದೊಡನೆ ವ್ಯವಹರಿಸುತ್ತಿರುವುದೆಂದೂ ಈ ಕಾರ್ಖಾನೆಯ ಸ್ಥಾಪನೆಗೆ ಮಂಗಳೂರು ಮತ್ತು ಕಾರವಾರಗಳೊಳಗೆ ಒಂದನ್ನು ಆರಿಸುವ ಸಂಭವವಿದೆಯಾಗಿಯೂ ಅಧಿಕೃತವಾಗಿ ತಿಳಿಯಲಾಗಿದೆ.

ಅಲ್ಬುಕರ್ಕ್ ಲೀಗ್ ಕ್ರಿಕೆಟ್: ಅಲ್ಬುಕರ್ಕ್ ಲೀಗ್ ಪಂದ್ಯಾಟದಲ್ಲಿ ಕಳೆದ ತಾ. 30ರಂದು ಮಂಗಳೂರು ಕೇಂದ್ರ ಮೈದಾನಿನಲ್ಲಿ ಎಂ. ಎಸ್. ಸಿ. ಮತ್ತು ಸೈಂಟ್ ಎಲೋಸಿಯಸ್ ಕೊಲೇಜ್‌ಗಳೊಳಗೆ ನಡೆದ ಪಂದ್ಯಾಟದಲ್ಲಿ ಎಂ. ಎಸ್. ಸಿ.ಯವರು 90 ಓಟಗಳಿಂದ ಕೊಲೇಜಿನವರನ್ನು ಸೋಲಿಸಿ ಪ್ರಚಂಡ ವಿಜಯ ಸಾಧಿಸಿದರು.

ಮಂಗಳೂರಿಗೆ ಮತ್ತೊಂದು ಸಬ್ ಡಿವಿಜನ್: ಮಂಗಳೂರು ವಿಭಾಗದಲ್ಲಿ ಸಾರ್ವಜನಿಕ ಕಾಮಗಾರಿ ಇಲಾಖೆಯಿಂದ ನಡೆಸಲಾಗುವ ಕೆಲಸಗಳ ಪ್ರಮಾಣವು ಅತ್ಯಧಿಕವಾಗಿದ್ದು, ಮೈಸೂರು ಸರಕಾರವು ಮಂಗಳೂರು ವಿಭಾಗದಲ್ಲಿ ಈಗ ಇರುವ ಪಿ. ಡಬ್ಲ್ಯು. ಡಿ. ಡಿವಿಜನ್ ಅಲ್ಲದೆ, ಎರಡು ವರ್ಷಗಳ ಅವಧಿಗೆ ಮತ್ತೊಂದು ಸಬ್ ಡಿವಿಜನ್ ರಚಿಸಲು ಮಂಜೂರಾತಿ ಕೊಟ್ಟಿದೆಯಾಗಿ ತಿಳಿಯಲಾಗಿದೆ. ಅದೇ ರೀತಿ ಬಂಟ್ವಾಳ ತಾಲೂಕಿಗೂ ಪ್ರತ್ಯೇಕ ಒಂದು ಸಬ್ ಡಿವಿಜನು ಮಂಜೂರಾಗಿದೆ. ಈ ಎರಡು ಸಬ್ ಡಿವಿಜನುಗಳೂ ತಾ. 1ರಿಂದ ಕಾರ್ಯೋನ್ಮುಖವಾಗಿವೆ.

ಕೊಕ್ಕೋ ಜೋನಲ್ ಫೈನಲ್: ಪ್ರೊ| ಎಂ. ಜಿ. ಎಸ್. ಸ್ಮಾರಕ ಸ್ತ್ರೀ ವಿಭಾಗದ ಕೊಕ್ಕೋ ಜೋನಲ್ ಫೈನಲ್ ಪಂದ್ಯಾಟವು ತಾ. 31ರಂದು ಮಂಗಳೂರು ಸರಕಾರೀ ಕೊಲೇಜಿನ ಆಟದ ಬಯಲಿನಲ್ಲಿ ಜರಗಿದಾಗ, ಮಂಗಳೂರು ಸರಕಾರೀ ಕೊಲೇಜಿನ ವಿದ್ಯಾರ್ಥಿನಿಯರು ಸ್ಥಳೀಯ ಸೈಂಟ್ ಎಗ್ನಿಸ್ ಕೊನ್ವೆಂಟ್ ವಿದ್ಯಾರ್ಥಿನಿಯರನ್ನು 20 ಪೊಯಿಂಟ್ಸ್‌ಗಳಿಂದ ಸೋಲಿಸಿದರು.

ಮರವೂರು ಸೇತುವೆಗೆ ಮಂಜೂರಾತಿ: ಮಂಗಳೂರಿನಿಂದ ಬಜ್ಪೆ ವಿಮಾನ ನಿಲ್ದಾಣಕ್ಕೆ ಪ್ರಸ್ತುತ: 17 ಮೈಲುಗಳ ಪ್ರಯಾಣ ಮಾಡಬೇಕಾಗಿದ್ದು ಅದನ್ನು ಕಡಿಮೆಗೊಳಿಸಿ ಬರೇ 9 ಮೈಲುಗಳೊಳಗೆ ನಿಲ್ದಾಣ ಸೇರಲು ಅನುಕೂಲವಾಗುವಂತೆ ಗುರುಪುರ ಹೊಳೆಗೆ ಮರವೂರಿನಲ್ಲಿ ಸೇತುವೆಯೊಂದನ್ನು ರಚಿಸುವರೆ ಮೈಸೂರು ಸರಕಾರವು ರೂ. 11-07 ಲಕ್ಷ ಮಂಜೂರು ಮಾಡಿದೆಯಾಗಿ ತಿಳಿದುಬರುತ್ತದೆ. ಮಂಗಳೂರಿನಿಂದ ಕದ್ರಿ, ಪೊಲಿಟೆಕ್ನಿಕ್, ಬೊಂದೇಲ್, ಮರವೂರು, ಬಜ್ಪೆ ಈ ರಸ್ತೆಯನ್ನು ಉತ್ತಮಗೊಳಿಸುವ ಯೋಜನೆಯನ್ನೂ ಇದರಲ್ಲಿ ಅವಳವಡಿಸಿಕೊಳ್ಳಲಾಗಿದೆ.

ತ್ರ್ಯಂಬಿಕ ಯಜ್ಞ: ಅಷ್ಟಗ್ರಹ ಯೋಗದ ಅನಿಷ್ಟ ನಿವಾರಣೆಯಾಗಿ ಶಾಂತಿ ಸ್ಥಾಪನೆಯಾಗುವಂತೆ ಮಂಗಳೂರು ಕೇಂದ್ರ ಮೈದಾನಿನಲ್ಲಿ ಅತ್ತಾವರ ಜನತಾ ಭಜನಾಮಂಡಳಿಯವರು ತಾ. 10—12—61ರಂದು ಹತ್ತು ಸಮುಸ್ತರ ಕೂಡುವಿಕೆಯಿಂದ ತ್ರಯಂಬಕ ಯಜ್ಞ ನಡೆಸಲು ನಿರ್ಧರಿಸಿರುವರು.

ಮಂಜೇಶ್ವರದಿಂದ ಕಮ್ಯೂನಿಸ್ಟ್ ಜಾಥಾ: ಕೇರಳ ರಾಜ್ಯದ ಕಡೆಗೆ ಕೇಂದ್ರ ಸರಕಾರ ಹಾಗು ಪ್ಲಾನಿಂಗ್ ಕಮಿಶನದವರು ತೋರಿಸುವ ಅಸಡ್ಡೆಯ ವಿರುದ್ಧ ಜನಜಾಗೃತಿಗೊಳಿಸುವರೆ ಕೇರಳ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ| ಇ. ಎಂ ಎಸ್. ನಂಬೂದ್ರಿಪಾದರ ನಾಯಕತ್ವದಲ್ಲಿ ಕಮ್ಯೂನಿಸ್ಟ್ ಜಾಥಾವೊಂದು ಮಂಜೇಶ್ವರದಿಂದ ಕಳೆದ ತಾ. 1ರಂದು ಬೆಳಗ್ಗೆ ತಿರುವನಂತಪುರಕ್ಕೆ ಹೊರಟಿದೆ. ಈ ಜಾಥಾದಲ್ಲಿ ಕಮ್ಯೂನಿಸ್ಟ್ ಲೋಕಸಭಾ ಸದಸ್ಯ ಶ್ರೀ| ಎ. ಕೆ. ಗೋಪಾಲನರೂ ಹೋಗಿರುವರು.

ದೋಣಿ ದುರಂತದಲ್ಲಿ ಮಡಿದವರಿಗೆ ಪರಿಹಾರ: ಕಳೆದ ಆಗೋಸ್ತು ತಿಂಗಳಲ್ಲಿ ನೇತ್ರಾವತಿ ನದಿಯಲ್ಲಿ ದೋಣಿ ದುರಂತದಲ್ಲಿ ನೀರುಪಾಲಾಗಿ ಮಡಿದ ಹತ್ತು ಮಂದಿಯ ಕುಟುಂಬದವರಿಗೆ ಸರಕಾರದಿಂದ ತಲಾ 200 ರೂಪಾಯಿ ಸಹಾಯಧನ ಮಂಜೂರಾಗಿದ್ದು, ಎಂಟು ಜನರ ಕುಟುಂಬದವರಿಗೆ ಉಳ್ಳಾಲದಲ್ಲಿ ಹಣವನ್ನು ತಹಶಿಲ್ದಾರರು ಕಳೆದ ತಾ. 30ರಂದು ವಿತರಣೆ ಮಾಡಿದರೆಂದು ತಿಳಿದುಬಂದಿದೆ.

ಎ. ಬಿ. ಶೆಟ್ಟಿರ ಪ್ರತಿಮೆ: ಬಂಟರ ಯಾನೆ ನಾಡವರ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಕಳೆದ ತಾ. 29ರಂದು ಮಂಗಳೂರು ಎಸ್. ಆರ್. ಎಸ್. ಹೋಮಿನ ವೆಂಕಪ್ಪ ಪೂಂಜಾ ಸಭಾಭವನದಲ್ಲಿ ಜರಗಿದಾಗ, ದಿವಂಗತ ಎ. ಬಿ. ಶೆಟ್ಟರ ಪ್ರತಿಮೆಯೊಂದನ್ನು ವೆಂಕಪ್ಪ ಪೂಂಜ ಸಭಾಭವನದಲ್ಲಿ ಇರಿಸಮರೆ ನಿರ್ಧರಿಲಾಯಿತು.

ಬ್ಯಾಂಕಿಂಗ್ ಸೇವೆ: ಭಾರತದಲ್ಲಿ ಬೇಂಕುಗಳು ಸಲ್ಲಿಸುತ್ತಿರುವ ಸೇವೆಯ ಕುರಿತು ನಿವೃತ್ತ ಅಸಿಸ್ಟಾಂಟ್ ಕಮಿಶನರರಾದ ಶ್ರೀ| ಪಿ. ಎಸ್. ತಿಮ್ಮಪ್ಪ ಶೆಟ್ಟರು ಕಳೆದ ತಾ. 28ರಂದು ವಿಜಯ ಬೇಂಕಿನಲ್ಲಿ ಜರಗಿದ ಸಭೆಯೊಂದರಲ್ಲಿ ವಿವರಿಸಿ ಹೇಳಿದರು. ಬೇಂಕಿನ ಅಧ್ಯಕ್ಷ ಡಾ| ಕೆ. ಬಾಲಪ್ಪ ಶೆಟ್ಟರು ಅಧ್ಯಕ್ಷತೆ ವಹಿಸಿದ್ದರು.

ಮಹಾಚುನಾವಣೆಗೆ ದ.ಕ.ಜಿಲ್ಲಾ ಕೊಂಗ್ರೆಸ್ ಹುರಿಯಾಳುಗಳು?

ಮುಂಬರುವ ಸಾರ್ವತ್ರಿಕ ಮಹಾಚುನಾವಣೆಗೆ ದ. ಕ. ಜಿಲ್ಲಾ ಕೊಂಗ್ರೆಸ್ ಹುರಿಯಾಳುಗಳ ಆಯ್ಕೆಯು ಇನ್ನೂ ಪೂರ್ತಿಗೊಂಡುದಿಲ್ಲ. ಬೆಂಗಳೂರಿನಲ್ಲಿ ಎಂ. ಪಿ. ಸಿ. ಸಿ.ಯು ಆ ಬಗ್ಗೆ ಪರಿಶೀಲನೆ ನಡೆಸುತ್ತಿದೆ. ಕೊಂಗ್ರೆಸ್ ಟಿಕೇಟಿಗಾಗಿ ಅರ್ಜಿ ಸಲ್ಲಿಸಿದ್ದ ಜಿಲ್ಲೆಯ ಕೊಂಗ್ರೆಸ್ ಅಭ್ಯರ್ಥಿಗಳಲ್ಲಿ ಕೆಲವರು ಇತ್ತೀಚೆಗೆ ಬೆಂಗಳೂರಿಗೆ ಹೋಗಿ ಮಂಗಳೂರಿಗೆ ಹಿಂತಿರಳಿರುವರು. ಅವರು ಮರಳಿದ ನಂತರ, ಎಂ. ಪಿ. ಸಿ. ಸಿ. ಚುನಾವಣಾ ಸಮಿತಿಯು ಈ ಕೆಳ ಕಂಡವರ ಹೆಸರುಗಳನ್ನು ಶಿಫಾರಸು ಮಾಡಿದೆ ಎಂಬ ವದಂತಿ ಹರಡಿದೆ. ಇದು ಅಧಿಕೃತ ಯಾದಿಯಲ್ಲ. ಅಧಿಕೃತ ಯಾದಿಯ ಪ್ರಕಟವಾಗಲು ಇನ್ನೂ ಒಂದೆರಡು ವಾರಗಳ ಅವಧಿ ತಗಲಬಹುದೆನ್ನಲಾಗಿದೆ. ಪ್ರಕೃತ ಸುದ್ದಿ ಪ್ರಪಂಚದಲ್ಲಿ ಸುಳಿಯುತ್ತಿರುವ ಅನಧಿಕೃತ ಯಾದಿಯಂತೆ ಈ ಕೆಳಗೆ ಕಾಣಿಸಿದ ಹೆಸರುಗಳು ಎಂ. ಪಿ. ಪಿ. ಸಿ. ಯಿಂದ ಶಿಫಾರಸು ಮಾಡಲ್ಪಟ್ಟಿದೆಯಾಗಿ ತಿಳಿಯಲಾಗಿದೆ.

ಉತ್ತರ ಲೋಕಸಭಾ ಸ್ಥಾನ:—
ಶ್ರೀ| ಯು. ಶ್ರೀನಿವಾಸ ಮಲ್ಯ.

ದಕ್ಷಿಣ ಲೋಕಸಭಾ ಸ್ಥಾನ:—
ಶ್ರೀ| ಎ. ಶಂಕರ ಆಳ್ವ

ಶಾಸನಸಭಾ ಕ್ಷೇತ್ರ:

- ಮೂಲ್ಕಿ— ಸುರತ್ಕಲ್ — ಶ್ರೀ| ಕೆ. ದೂಮಪ್ಪ.
- ಕಾಪು— ಶ್ರೀ| ಎಫ್. ಎಕ್ಸ್. ಡಿ ಪಿಂಟೊ.
- ಮೂಡಬಿದ್ರೆ—ಕಾದಿಟ್ಟ ಸ್ಥಾನ: ಶ್ರೀ| ಮಂಜಪ್ಪ ಉಳ್ಳಾಲ್.
- ಕಾರ್ಕಳ— ಡಾ| ಕೆ. ಕೆ. ಹೆಗ್ಡೆ.
- ಉಡುಪಿ— ಶ್ರೀ| ಟಿ. ಎ. ಪೈ.
- ಬ್ರಹ್ಮಾವರ— ಶ್ರೀ| ಅಲಂಗಾರು ನಾರಾಯಣ ಹೆಗ್ಡೆ.
- ಕುಂದಾಪುರ ಶ್ರೀ| ಎಸ್. ಎಸ್. ಕೊಳ್ಕೆಬೈಲ್.
- ಬೈಂದೂರು— ಶ್ರೀ| ಎಡ್ತರೆ ಮಂಜಪ್ಪ ಸೆಟ್ಟಿ.
- ಮಂಗಳೂರು I— ಶ್ರೀ| ಮಣೇಲ ಶ್ರೀನಿವಾಸ ನಾಯಕ್.
- ಮಂಗಳೂರು II— ಶ್ರೀ| ಕೆ. ಸೂರ್ಯನಾರಾಯಣ ಅಡಿಗ
- ಪಾಣೆಮಂಗಳೂರು-ಗುರುಪುರ — ಡಾ| ಕೆ. ನಾಗಪ್ಪ ಆಳ್ವ.
- ಬಂಟ್ವಾಳ-ಬೆಳ್ತಂಗಡಿ— ಶ್ರೀ| ಬಿ. ವೈಕುಂಠ ಬಾಳಿಗ.
- ಪುತ್ತೂರು-ವಿಟ್ಲ— ಶ್ರೀ| ಕೆ. ವೆಂಕಟ್ರಮಣ ಗೌಡ. ಕಾದಿಟ್ಟ ಸ್ಥಾನ- ಶ್ರೀಮತಿ ಪದ್ಮಾವತಿ.

ಉಡುಪಿ, ಬೆಳ್ತಂಗಡಿ, ಮಂಗಳೂರು II ಕ್ಷೇತ್ರಗಳಲ್ಲಿ ಮೇಲ್ಕಾಣಿಸಿದ ಅಭ್ಯರ್ಥಿಗಳು ಸ್ಪರ್ಧಿಸಲು ಒಪ್ಪದಿದ್ದಲ್ಲಿ ಶ್ರೀಗಳಾದ ಮಧ್ವರಾಜ, ಬಿ ನಾರಾಯಣ ನಾಯಕ್ ಮತ್ತು ಬಿ. ರಾಜೀವ ಭಂಡಾರಿಗಳು ಅನುಕ್ರಮವಾಗಿ ಆ ಸ್ಥಾನಗಳಿಗೆ ಆಯ್ಕೆಯಾಗಬಹುದೆನ್ನಲಾಗಿದೆ; ಮೂಡಬಿದ್ರೆಯ ಧರ್ಮಸಾಮ್ರಾಜ್ಯರ ಹೆಸರೂ ಯಾದಿಯಲ್ಲಿ ಸೇರಿದೆಯೆಂದು ಕೇಳಿಬರುತ್ತದೆ.

— —

ಉದ್ಯಾನ ಸ್ಪರ್ಧೆ: ಮಂಗಳೂರು ಸರಕಾರೀ ತರಬೇತಿ ಕೊಲೆಜಿನ ವಠಾರದಲ್ಲಿ ತೋಟಗಾರಿಕೆ ಮತ್ತು ಫಲ-ಪುಷ್ಪಗಳ ಸ್ಪರ್ಧೆಯನ್ನು ಮೈಸೂರು ಹೊರ್ಟಿಕಲ್ಚರಲ್ ಸೊಸೈಟಿಯವರು ಸ್ಥಳೀಯ ಶಾಖೆಯ ಆಶ್ರಯದಲ್ಲಿ ಈ ತಿಂಗಳ ತಾ. 13ರಿಂದ 19ರ ತನಕ ನಡೆಸಲು ನಿರ್ಣಯಿಸಿರುವರು.

ಮಂಗಳೂರು-ಹಾಸನ ರೈಲ್ವೇ: ಹಾಸನ-ಮಂಗಳೂರುಗಳ ನಡುವೆ ಮಿಟರ್ ಗೇಜ್ ಮತ್ತು ಬ್ರೋಡ್ ಗೇಜ್ ಹೀಗೆ ಎರಡು ರೀತಿಯ ರೈಲು ದಾರಿಗಳನ್ನು ರಚಿಸುವಂತೆ ಮೈಸೂರು ರಾಜ್ಯ ಸರಕಾರವು ಕೇಂದ್ರ ಸರಕಾರವನ್ನು ಕೇಳಿಕೊಂಡಿದೆ ಎಂದು ತಿಳಿದುಬಂದಿದೆ. ಈ ಸಂಬಂಧ ಕೇಂದ್ರದೊಡನೆ ಪರ್ಯಾಲೋಚನೆ ನಡೆಸಲು ಕಾನೂನು ಮಂತ್ರಿ ಶ್ರೀ| ಬಿ. ವೈಕುಂಠ ಬಾಳಿಗರು ದೆಹಲಿಗೆ ಹೋಗುವ ನಿರೀಕ್ಷೆಯಿದೆ.

— —

ಮಂಗಳೂರು

ಕಳೆದ ತಾ. 29—10—61ನೇ ಆದಿತ್ಯವಾರ ಬೆಳಗ್ಗೆ ಮೊಗವೀರ ಸ್ಟೂಡೆಂಟ್ಸ್ ಯೂನಿಯನ್ ಸಂಘದ ಮತಿಯಿಂದ, ಮೊಗವೀರ ಸಮಾಜದ ಗಣ್ಯ ವ್ಯಕ್ತಿ ಹಾಗೂ ಅಮೇರಿಕದಲ್ಲಿ ಉಚ್ಚಶಿಕ್ಷಣ ಪಡೆದು ಹಿಂತಿರುಗಿರುವ ಶ್ರೀಯುತ ಲಾಲಾಜಿ ಸಾಲಿಯಾನ್, ಬಿ. ಇ.ರವರನ್ನು ಸಭೆಗೆ ಆಮಂತ್ರಿಸಿ, ಬೊಕ್ಕಪಟ್ಣ ಮೊಗವೀರ ಲಿಟರರಿ ಯೂನಿಯನ್‌ನ ಕಟ್ಟಡದಲ್ಲಿ ಸತ್ಕರಿಸಲಾಯಿತು. ಪ್ರಾರಂಭದಲ್ಲಿ ಕುಮಾರಿಯರಾದ ಶೀಲಾ, ಸುನಂದ, ಅಂಬುಜಾಕ್ಷಿಯರಿಂದ ಪ್ರಾರ್ಥನೆ ನಡೆದ ಬಳಿಕ ಶ್ರೀನಿವಾಸರವರು ಸ್ವಾಗತಭಾಷಣ ಹಾಗೂ ಅತಿಥಿ ಪರಿಚಯ ಮಾಡಿಕೊಟ್ಟರು.

ಶ್ರೀ| ಲಾಲಾಜಿ ಸಾಲಿಯಾನರು ತಮ್ಮ ಅಮೇರಿಕದ ಅನುಭವವನ್ನು ಸಭೆಗೆ ವಿವರಿಸಿದರು. ಸಭಿಕರ ಪೈಕಿ ಶ್ರೀಗಳಾದ ಜೆ. ಎ. ಪುತ್ರನ್. ರಮೇಶ ಕರ್ಕೇರರು ಭಾಷಣಮಾಡಿದರು. ಸಭಾಧ್ಯಕ್ಷರಾದ ಸುಮಿತ್ರ ತಿಂಗಳಾಯರು ಸಮಯೋಚಿತ ಭಾಷಣಗೈದರು.

ಜತೆಕಾರ್ಯದರ್ಶಿ ಧರ್ಮಕುಮಾರರು ಸಂಘದ ಕಾರ್ಯಚಟುವಟಿಕೆಗಳನ್ನು ಅಥಿತಿಗಳಿಗೆ ವಿವರಿಸಿ, ಧನ್ಯವಾದಾರ್ಪಣೆಗೈದರು. ರಾಷ್ಟ್ರಗೀತೆಯ ಬಳಿಕ ಸಭೆ ಮುಕ್ತಾಯವಾಯಿತು.

— —

ಏಕಾಂಕ ನಾಟಕ:

ದೇವಾನಾಂ ಪಿಯಪ್ರಿಯದಾಸಿ

(ಕುಮಾರಿ ವಿನೋದಿನಿ ನಾಯಕ್, ಬಿ. ಎ., ಬಿ. ಟಿ., ಮಂಗಳೂರು.)

[ಕಳೆದ ಸಂಚಿಕೆಯಿಂದ ಮುಂದುವರಿದುದು]

೨ನೇ ದೃಶ್ಯ

(ಆಸನದಲ್ಲಿ ಅಶೋಕ ಮಹಾರಾಜ ಕುಳಿತುಕೊಂಡಿದ್ದಾನೆ. ತೆರೆಯೆತ್ತಿದೊಡನೆ ಎದ್ದು, ಚಿಂತಾಭಾವದಿಂದ, ಯೋಚನಾಮಗ್ನನಾಗಿ ಶತಪಥ ಹಾಕುತ್ತಿರುವನು. ದೂತರಿಬ್ಬರು ಆಸನದ ಸಮೀಪ ಹಿಂದುಗಡೆ ನಿಂತುಕೊಂಡಿದ್ದಾರೆ. ರಮನೆಯಲ್ಲಿ—ಒಂದು ದೃಶ್ಯ.)

ಅಶೋಕ: ಇಂದಿಗೆ ಕಳಿಂಗ ಯುದ್ಧ ಪ್ರಾರಂಭವಾಗಿ ಸರಿಯಾಗಿ ಎಂಟು ದಿನಗಳು. ಇದುವರೆಗೂ ಯಾವ ಸುದ್ದಿಯೂ ಬಾರದಿರಲು ಕಾರಣವೇನು?.... ಒಂದು ವೇಳೆ ಯುದ್ಧವು ಇನ್ನೂ ಕೊನೆಗೊಂಡಿಲ್ಲವಾದರೆ, ಸುದ್ದಿ ಕಳುಹಿಸಲು, ನಿಧಾನವಾಡಿರಬಹುದು. ಅದರೆ ಯುದ್ಧ ಮುಂದರಿಯುವ ಚಿಹ್ನೆಗಳೇನಾದರೂ ಇದ್ದಲ್ಲಿ, ಹೊಸ ಸೈನಿಕರಿಗೆ ಸಿದ್ಧರಾಗಲು ಆಜ್ಞೆ ಬಂದೇ ಬರುತಿತ್ತು. ಆಹಾರ ಸರಬರಾಯಿಗಾಗಿ, ಆಯುಧಗಳಿಗಾಗಿ, ರಾಜಧಾನಿಗೆ ಕರೆ ಬರುತ್ತಿತ್ತು. ಆದ್ದರಿಂದ ಯುದ್ಧವು ಮುಂದರಿಯಲಿಕ್ಕಿಲ್ಲ! ಬಹುಶಃ ಕೊನೆಗೊಳ್ಳುವಷ್ಟರಲ್ಲಿ ಇದ್ದಿರಬೇಕು. ಒಂದು ಪಕ್ಷ, ಜಯವು ನಮ್ಮವರಿಗೆ ದೊರಕದೆ ಇದ್ದಿರಬಹುದೇ?.... ಹಾಗೇನಾದರೂ ಆದಲ್ಲಿ ಯುದ್ಧರಂಗಕ್ಕೆ ಸ್ವತಃ ನಾನೇ ತೆರಳುವೆನು. ಮೌರ್ಯ ಚಕ್ರವರ್ತಿ ಅಶೋಕನು ಎಂದಿಗೂ ಸೋಲನ್ನನುಭವಿಸಿಲ್ಲ! ಹಾಗಿರುವಾಗ, ಈ ಕ್ಷುಲ್ಲಕ ಯುದ್ಧದ ಸೋಲಿಗಾಗಿ ಬೆದರುವೆನೇ? ನಾನೇ ಯುದ್ಧದ ನಾಯಕನಾಗಿ ಕಳಿಂಗವನ್ನು ಜಯಿಸಿಯೇ ಪಾಟಲಿಪುತ್ರವನ್ನು ಪ್ರವೇಶಿಸುವೆನು. ಏಕೋ, ಇಂದು ಬೆಳಗ್ಗೆ ನನ್ನ ಎಡಗಣ್ಣು ಸ್ಫುರಿಸುತ್ತಿತ್ತು. ಈಗ ಬಲಗಣ್ಣು ಒಂದೇ ಸಮನೆ ಅದರುತ್ತಿದೆ. ಇದು ಶುಭಸೂಚಕವಾಗಿದೆ!

(ಅಷ್ಟರಲ್ಲಿ ದೂತನೊಬ್ಬನ ಪ್ರವೇಶ. ಒಂದು ಸಂದೇಶವನ್ನು ರಾಜನಿಗೆ ಕೊಟ್ಟು ಬಗ್ಗಿ ನಮಸ್ಕರಿಸುವನು)

(ಸಂದೇಶವನ್ನು ಓದಿ ಮನಸ್ಸಿನಲ್ಲಿ ಆನಂದವುಂಟಾಗುವುದು. ಮುಗುಳ್ನಗುತ್ತಾ ಕಾಗದವನ್ನು ಓದುತ್ತಾ) 'ಕಳಿಂಗವು ನಿನ್ನೆ ಸಂಜೆ ನಮ್ಮ ಕೈವಶವಾಯಿತು. ತಾವು ಸ್ವತಹ ಇಲ್ಲಿಗೆ ದಯಮಾಡಿಸಿ ರಾಜ್ಯಭಾರದ ಸೂತ್ರವನ್ನು ಕೈಗೆತ್ತಿಕೊಳ್ಳುವುದು ಉತ್ತಮ. ಇಲ್ಲಿಯ ಸ್ಥಿತಿಗತಿಗಳನ್ನು ಮಹಾರಾಜರು ಪ್ರತ್ಯಕ್ಷ ನೋಡುವುದರಿಂದ, ಮುಂದಿನ ಕಾರ್ಯಕ್ಕೆ ಬಹಳ ಸಹಾಯವಾಗುವುದು'— ಇತಿ ತಮ್ಮ ನಮ್ರ ಸೇವಕ).

ಹಾಗಾದರೆ ನನ್ನ ಸಾಮ್ರಾಜ್ಯ ಸ್ಥಾಪನೆಯ ಕನಸು ನನಸಾಗುವುದರಲ್ಲಿದೆ. ಕಳಿಂಗ ವಿಜಯವೇ ನನ್ನ ಕನಸಿನ ಸೌಧದ ಅಡಿಗಲ್ಲು. ಮುಂದಿನ ವಿಜಯಗಳು ಇನ್ನು ದೂರದಲ್ಲಿಲ್ಲ! ಚಕ್ರವರ್ತಿ ಬಿರುದು ನಿಜವಾಗಬೇಕಾದರೆ, ಇಡೀ ಭರತಭೂಮಿ ನನ್ನ ವಶವಾಗಬೇಕು. ಈ ಕೆಲಸವನ್ನು ಶೀಘ್ರದಲ್ಲೇ ಪೂರೈಸಬೇಕು. ನಿಜವಾಗಿಯೂ ವಿಧಿಯು ಸಂಪೂರ್ಣ ನನ್ನನ್ನು ಒಲಿದಿರುವುದರಲ್ಲಿ ಸಂದೇಹವೇನು? ಮೊದಲು ಕಳಿಂಗಕ್ಕೆ ಭೇಟಿಯಾಗಲಿ!

೩ನೇ ದೃಶ್ಯ

(ಪ್ರಧಾನಿ, ಮಾಂಡಲಿಕ ಭಾನುಗುಪ್ತ, ಅಶೋಕ ಮಹಾರಾಜ, ಅಂಗರಕ್ಷಕರಿಬ್ಬರು ರಣರಂಗದ ಸಮೀಪ ಬರುತ್ತಿರುವಾಗ ಸ್ವಲ್ಪ ಮರೆಯಲ್ಲಿ ನಿಂತು, ಕೇಳುವರು.)

(ತೆವಳುತ್ತಿರುವ ಸೈನಿಕನೊಬ್ಬ ಅವನ ತಾಯಿಯ ಸಮೀಪದಲ್ಲಿ)

ಸೈನಿಕ: (ಬಿಕ್ಕುತ್ತಾ) "ಅಮ್ಮಾ ಶೋಕಿಸಬೇಡ! ಮನೆಗೆ ತೆರಳು. ನಾನು ಬದುಕುವೆನೆಂಬ ನಿನ್ನ ಈ ಆಸೆ ವ್ಯರ್ಥವಾದುದು. ಎಂದು ಸೈನಿಕ ವೃತ್ತಿಗೆ ಸೇರಿದೆನೋ ಅಂದೇ.... ನನ್ನ ಪ್ರಾಣವು.... ಪಣವಾಗಿತ್ತು. ಇಂದು ಅದು ದೇಹದಿಂದ ಬಿಡುಗಡೆಯಾಗುವ ಸಮಯ ಬಂದಿದೆ."

ತಾಯಿ: "ಮಗೂ (ಅಳುತ್ತಾ, ಗದ್ಗದ ಕಂಠದಿಂದ) ಅಂತಹ ಮಾತುಗಳನ್ನಾಡಬೇಡ. ಅವು ನನ್ನನ್ನು ಈಟಿಯ ಇರಿತದಂತೆ ಘಾಸಿಗೊಳಿಸುತ್ತವೆ. ಒಂಭತ್ತು ತಿಂಗಳು ಹೊತ್ತು ಹೆತ್ತು ಸಲಹಿದ ಮುದ್ದು ಕುಮಾರ--ನೀನು ನನ್ನನ್ನು ಅಗಲುವಿಯಾದರೆ ನಾನು ಬದುಕಿ ಉಳಿಯುವುದಾದರೂ ಹೇಗೆ? ಕೈತುಂಬ ವೇತನವೆಂದು ಈ ಸೈನಿಕ ವೃತ್ತಿಗೆ ಸೇರಿದಿ. ಬೇಡವೆಂದರೂ ಕೇಳಲಿಲ್ಲ. ಹಣವನ್ನು ಪಡೆದು, ಮಗನನ್ನು ಕಳೆದು ಎಂತಹ ಬಾಳ್ವೆ ಮಾಡಲಿ? ಅದೊಂದು ಬಾಳೆ? ಯಾರಿಗಾಗಿ ಮನೆಯನ್ನು ಮಾಡಿದೆವೋ ಯಾರ ನಗೆಮಾತುಗಳಿಂದ ಹರ್ಷಗೊಳ್ಳುತ್ತಿದ್ದೇನೋ ಆ ಮಗನಿಲ್ಲದ ಮನೆಗೆ ಹೇಗೆ ತೆರಳಲಿ? ಅದಕ್ಕಿಂತ ಈ ರಣಭೂಮಿಯೇ ಲೇಸು!"

ಸೈನಿಕ: "ಅಮ್ಮಾ, ನೀರು, ನೀರು ....ಅಮ್ಮಾ ಕತ್ತಲು, ನಾನು.... ಉಳಿಯುವುದಿಲ್ಲ...." (ಮೂರ್ಛೆ ತಪ್ಪುವನು).

ತಾಯಿ: "ಹಾಯ್! ಯಾವ ಅಪರಾಧಕ್ಕೆ ನನಗೀ ಶಿಕ್ಷೆ? ಮಗನೇ, ಯಾವ ಜನ್ಮದಲ್ಲಿ ಮಾಡಿದ ತಪ್ಪಿಗಾಗಿ ಈ ನೋವು? ಅಯ್ಯೋ! ಈ ನನ್ನ ಕಂದನನ್ನು ಳಿದು ನಾನು ಹೇಗೆ ಬದುಕಲಿ? ಯಾರಿಗಾಗಿ ಬದುಕಲಿ? ನನ್ನ ಜೀವಿತದ ಉಸಿರೇ ನಂದಿರುವುದು. ಯಾರೊಡನೆ ಈ ಅಳಲನ್ನು ತೋಡಿಕೊಳ್ಳಲಿ? ಯಾರಿಗೆ ಈ ನೋವಿನ ಅಳ ಉಂಟಾಗುವುದು? ಅಯ್ಯೋ! (ಮುಖ ಮುಚ್ಚಿ ಅಳುವಳು). ಈ ಮುದ್ದು ಕಂದನನ್ನು ಈ ದುಸ್ಥಿತಿಗಿಳಿಸಿದ ಆ ಅಶೋಕ ಮಹಾರಾಜನು ಇದೇ ನೋವಿನಿಂದ ಕಂಗೆಟ್ಟು ಹುಚ್ಚೇರಿ ಅಳಿಯಲಿ! (ಅಳುವಳು). ಆತನ ವಂಶ ನಿರ್ನಾಮವಾಗಿ ಧೂಳಿದೂಸರಿತವಾಗಲಿ! ಅಯ್ಯೋ! ಮಗನೇ!" (ಹಲುಬುವಳು).

ಅಶೋಕ: (ಮುಂದಕ್ಕೆ ಬಂದು) "ಎಲೀ ಸ್ತ್ರೀಯೇ ಯಾರನ್ನು ನೀನು ಶಪಿಸುತ್ತಿರುವೆ ಎಂದು ವಿಚಾರಿಸಿದ್ದಿಯಾ? ಅಶೋಕ ಮಹಾರಾಜನು ನಾನು. ನನ್ನೆದುರು ನಿನ್ನ ಆ ಬಿಂಕದ ಕೊಂಕು ಮಾತುಗಳನ್ನು ಆಡು ನೋಡೋಣ!"

ತಾಯಿ: (ಸಿಟ್ಟು ದುಃಖದಿಂದ) "ಅಶೋಕನಾದರೇನು? ನನ್ನ ಮಗನನ್ನು ನನಗೆ ಹಿಂದಿರುಗಿಸಬಲ್ಲೆಯಾ? ಮೋಹದ ಕಂದನ ತುಟಿಗಳನ್ನು ಒಮ್ಮೆ ಅರಳಿಸಬಲ್ಲೆಯಾ? ನನ್ನ ಕುಮಾರನ ದೇಹದಲ್ಲೊಮ್ಮೆ ಚೈತನ್ಯ ತರಬಲ್ಲೆಯಾ? ಅಶೋಕನಾದರೇನು? ಮಹಾರಾಜನಾದರೇನು? ನನ, ತಾಯಿಹೃದಯಕ್ಕೆ ಬೆಂಕಿಯ ಕೊಳ್ಳಿಯಿಟ್ಟ ಆ ಅಶೋಕನಿಗೆ ನನ್ನದೊಂದು ಪ್ರಶ್ನೆ! ಪ್ರಜೆಗಳಿಗೆ ನೋವು ಉಂಟುಮಾಡಿದರೆ, ಅವನಿಗೆ ಆನಂದವುಂಟಾಗುವುದೇ? ನನ್ನ ಕಣ್ಣೀರು ಅವನಿಗೆ ನಗುವನ್ನು ತರಿಸುವುದೇ? ನನ್ನ ಬರಿದಾದ ಬಾಳು, ಅವನ ಜೀವನ ತುಂಬುವಂತೆ ಮಾಡುವುದೇ?"

ಅಶೋಕ: ಬುದ್ಧಿಯಿಲ್ಲದ ಹೆಂಗಸು; ಪ್ರಧಾನಿಗಳೇ, ಇವಳಿಗೆ ಬೇಡಿದಷ್ಟು ಹಣ ಕೊಡಿರಿ.

ತಾಯಿ: ಅಪ್ಪಾ ಯಾರಿದ್ದು ನನಗೆ ಹಣ ಕೊಟ್ಟು, ಮಗನ ನಷ್ಟ ತುಂಬುವವರು? ಪರಲೋಕ ಸೇರಿದ ಮೇಲೆ ಆ ಅಶೋಕನು ಆ ನ್ಯಾಯಕರ್ತನ ಎದುರು ಈ ತಪ್ಪಿಗೆ ಏನೆಂದು ಉತ್ತರಕೊಡುವನು? ಅದನ್ನು ತಿಳಿಸಿದರೆ ಸಾಕು (ಅಳುತ್ತಾ ಇರುವಳು. (ಅಷ್ಟರಲ್ಲಿ ಒಬ್ಬ ಸ್ತ್ರೀ ಕೂದಲುಗಳನ್ನು ಕೆದರಿಕೊಂಡು, ಬಿಳಿ ಸೀರೆಯನ್ನುಟ್ಟು, ಒಂದು ಬದಿಯಿಂದ ಆಗಮಿಸುವಳು). (ಗದ್ಗದಿಸುತ್ತಾ) ನನ್ನ ರಕ್ಷಕನೇ ಎಲ್ಲಿರುವೆ ; ನೀನು? ನೀನು ತೆರಳಿದ ಮೇಲೆ ನಾನೆಲ್ಲಿ ಬದುಕುವೆನು! ನಿನ್ನನ್ನಳಿದು ಸಂಸಾರವೇಕೆ? ಸಂಸಾರ ರಥದ ಚಕ್ರವು ಕಳಚಿದ ಮೇಲೆ ಇನ್ನೊಂದು ಗಾಲಿಯು ಉರುಳುವುದು ಸಹಜ! ಒಂದು ಕಣ್ಣಿನ ಕುರುಡುತನವು ಆಜೀವಪರ್ಯಂತ ಶೂಲವಾಗಿರುವುದು. ನಿನ್ನೊಡನೆ ಸಹಗಮನ ಹೊಂದಲು ಬಂದಿರುವೆನು. ಎಲ್ಲಿರುವೆ ಮನೋಹರಾ? ಪ್ರಿಯಕರಾ! ನನ್ನ ಪ್ರೇಮನಿಧಿಯೇ ಎಲ್ಲಿರುವೆ? (ಅಳುತ್ತಾ, ಹುಡುಕುತ್ತಾ, ಅಶೋಕನನ್ನೂ, ಇತರರನ್ನೂ ಗಮನಿಸದೆ ಪುನಃ ಹುಡುಕುತ್ತಾ ಕೊನೆಗೆ ಬದಿಯಲ್ಲಿ ಮಲಗಿದ ವ್ಯಕ್ತಿಯೊಬ್ಬನ ತಲೆಯನ್ನು ತೊಡೆಯ ಮೇಲಿರಿಸಿ, "ಹಾಯ್" "ನನ್ನ ಜೀವನ ಸರ್ವಸ್ವ" "ಅಯ್ಯೋ!" ಎನ್ನುತ್ತಾ) "ಈ ಸ್ಥಿತಿಯನ್ನು ನಿನಗೆ ತಂದಿಟ್ಟ ಆ ಅಶೋಕ ಮಹಾರಾಜನಿಗೆ ಪತ್ನಿ ವಿಯೋಗವುಂಟಾಗಿ, ವಿರಹವೇದನೆಯುಂಟಾಗಲಿ ನನ್ನ ಪ್ರೀತಿ ತುಂಬಿದ ಹೃದಯಕ್ಕೆ ವಿಷ ಬಾಣ ತೊಟ್ಟ ಆ ಅಶೋಕನು ಹೃದಯವೇದನೆಯಿಂದ ಆಯುಷ್ಯ ಪರ್ಯಂತ ನರಳಲಿ! ಅಯ್ಯೋ! ನನ್ನ ಜೀವನವು ಆರಂಭವಾಗಿ ಎರಡು ಪಕ್ಷಗಳು ಕಳೆಯುವಷ್ಟರಲ್ಲಿ ಘೋರವಾದ ಕಾರ್ಗತ್ತಲೆ ಮುಸುಕಿದುದೆ? ಜೀವನದ ಮಧುವನ್ನುಣ್ಣುವಾಗಲೇ ಪಾತ್ರೆಯು ಇಬ್ಭಾಗವಾದುದೇ? ತನ್ನ ದುಷ್ಟ ಆಸೆಗಾಗಿ, ಅಶೋಕನು ನಮ್ಮ ಜೀವನವನ್ನು ಕಡಿದುಬಿಟ್ಟನು. ಎಂತಹ ಕ್ರೂರಹೃದಯಿಯಿರಬೇಕು. ಆತನಿಗೂ ಮೋಹದ ಮಡದಿ ಇಲ್ಲವೇ? ಆತನೇನು ಪ್ರಪಂಚ ನಿಯಮಕ್ಕೆ ಬಾಹಿರನೇ? ಪತಿವ್ರತೆಯ ಬೆಂದ ಹೃದಯದಿಂದ ಹೊರಬಿದ್ದ ನುಡಿ ಅಸತ್ಯವಾಗಲಾರದು. ಅಯ್ಯೋ! ನನ್ನ ಜೀವನ ಸರ್ವಸ್ವವೇ ಹಾಯ್ (ಅಳುತ್ತಿರುವಳು).

ಅಶೋಕ: "ಹಿಡಿಯಿರಿ, ಹಿಡಿಯಿರಿ, ಆಕೆಯು ಸಹಗಮನಮಾಡಬೇಕಾಗಿಲ್ಲ. ನನ್ನ ಅಂತಃಪುರದಲ್ಲಿ ಸಖಿಯಾಗಿ ಸುಖ ಜೀವನ ಮಾಡುತ್ತಿರಲಿ". (ಇಬ್ಬರು ಅಂಗರಕ್ಷಕರು ಆಕೆಯನ್ನು ಎಳೆದು ತರುತ್ತಾರೆ.)

ಸ್ತ್ರೀ: ನನಗೆ ನನ್ನ ಇಷ್ಟದಂತೆ ವರ್ತಿಸಲು ಆಕ್ಷೇಪಿಸುವವರಾರು? (ಸೆಟೆದು ನಿಂತು ದರ್ಪ, ಸಿಟ್ಟು ದುಃಖದಿಂದ) ನನ್ನ ಪತಿಯೊಡನೆ ಸಹಗಮಿಸಲು ಯಾತರ ದೇನು ಅಡ್ಡಿ? ಪತಿಯಿಲ್ಲದ ನಿರ್ಭಾಗ್ಯ ಬಾಳನ್ನು ಬಾಳಲಾರೆನು. ನನ್ನನ್ನು ಉಳಿಸಬೇಕೆಂಬ ಇಚ್ಛೆ ಇದ್ದರೆ, ಈಗಲೇ ನನ್ನ ಪತಿಯನ್ನು ಬದುಕಿಸಿರಿ. ಯಾವಾತನಿಗೆ ಸೃಷ್ಟಿಸಲು ಸಾಧ್ಯವಿಲ್ಲವೋ ಅವನಿಗೆ ಪ್ರಕೃತಿಯ ಯಾವ ಸೃಷ್ಟಿಯನ್ನೂ ನಾಶಮಾಡಲು ಸಾಧ್ಯವಿಲ್ಲ. ನಾಶ ಮಾಡುವ ಅಧಿಕಾರ ಕೊಟ್ಟವರು ಯಾರು?" (ತಪ್ಪಿಸಿಕೊಂಡು ಮರೆಯಾಗುವಳು).

(ಅಷ್ಟರಲ್ಲಿ ಇಬ್ಬರು 7—8 ವರ್ಷ ಪ್ರಾಯದ ಬಾಲಕರ ಪ್ರವೇಶ).

ಒಬ್ಬ: "ಅಪ್ಪಾ, ಅಪ್ಪಾ, ಓ, ಎನ್ನ ಬಾರದೆ ತಂದೆ? ಅಯ್ಯೋ! ಬೆಳಗ್ಗಿನಿಂದ ಅಪ್ಪನನ್ನು ಹುಡುಕುತ್ತಾ ಕಾಲುಗಳು ನೋಯುತ್ತಿವೆ; ಕಂಠ ಬಿಗಿಯುತ್ತಿದೆ; ಎದೆ ಈ ರುದ್ರ ಭೀಕರ ದೃಶ್ಯದಿಂದ ತುಂಬಿದೆ."

ಇನ್ನೊಬ್ಬ: "ಅಪ್ಪಾ, ನಾವು ನಿನ್ನ ಪ್ರೀತಿಯ ಜಯವಿಜಯರು. ಎಲ್ಲಿರುವೆ ನೀನು? ನಮಗೆ ಈ ರುದ್ರಭೂಮಿಯಲ್ಲಿ ನಡೆಯುವಾಗ ಬಲು ಹೆದರಿಕೆಯಾಗುತ್ತಿದೆ. ಒಮ್ಮೆ ನಿನ್ನ ಧ್ವನಿ ಕೇಳಿಸು

ವೆಂತೆ ಮಾಡು, ಇರಲಿ, ಒಂದೇ ಬಾರಿ ನಿನ್ನ ಸ್ವರ ಕೇಳಿದರೆ ಸಾಕು!''

ಒಬ್ಬ: ''ಈ ಯುದ್ಧರಂಗದ ಶೂನ್ಯ ದೃಶ್ಯ; ಸ್ಮಶಾನ ಮೌನ, ಭೀಕರ ನರಳುವಿಕೆ ಹೆದರಿಕೆಯಿಂದ ಕಂಗೆಟ್ಟಿರುವೆವು. ಅಯ್ಯೋ! ಏನು ಮಾಡಲಿ; ಮನೆಯಲ್ಲಿ ಅಮ್ಮನೊಬ್ಬಳೇ! ಆಕೆಯಂತು ಎರಡು ದಿನಗಳಿಂದ ಅನ್ನಾಹಾರ ನೀರು ತೆಗೆದುಕೊಳ್ಳದೆ, ಹುಚ್ಚಿಯಂತಾಗಿಬಿಟ್ಟಿದ್ದಾಳೆ. ನಾವೇನು ಮಾಡಬೇಕು? ಅಪ್ಪಾ, ನೀನು ಹಾಗೆ ನಮ್ಮನ್ನು ಬಿಟ್ಟು ಹೋಗಬಹುದೇ? ಬೇಗನೆ ಮನೆಗೆ ಬರಬಾರದೇ? ಅಯ್ಯೋ! ನನಗೆ ಅಂಜಿಕೆಯಿಂದ ದೇಹವಿಡೀ ನಡುಗುತ್ತಿದೆ."

ಇನ್ನೊಬ್ಬ: "ಅದೋ ದೂರದಲ್ಲಿ ಚಲಿಸುತ್ತಿರುವುದೇನು? ಮನುಷ್ಯಾಕಾರದ ಭೂತಗಳೋ? ಅಲ್ಲಿ ಹಾರಾಡುತ್ತಿರುವ ಆ ಹಕ್ಕಿಗಳೋ; ಬಲು ಭಯಂಕರವಾಗಿವೆ; ಅವು ಗಳಿಗೆಗೊಮ್ಮೆ ಕೆಳಗೆ ಬಂದು ಏನನ್ನು ಎತ್ತುತ್ತಿರುವವು? ನಮ್ಮ ಅಪ್ಪನಿಗೆ ಈ ಯುದ್ಧಭೂಮಿಯಲ್ಲಿ ಅವಘಡವೇನಾದರೂ ಸಂಭವಿಸಿದ್ದರೆ?"....

ಅಶೋಕ: (ಮರೆಯಿಂದ ಎದುರಿಗೆ, ಮಕ್ಕಳ ಸಮೀಪ ಬಂದು) "ಮಕ್ಕಳೇ, ನಿಮ್ಮ ಮನೆಯೆಲ್ಲಿ? ನಿಮ್ಮ ತಂದೆ ಯಾರು? ನಿಮ್ಮ ತಾಯಿ ಎಲ್ಲಿರುವಳು?"

ಒಬ್ಬ: "ನಮ್ಮ ತಂದೆ ಕಳಿಂಗರಾಜನ ಸೈನ್ಯದಲ್ಲಿ ಒಬ್ಬ ಸೈನಿಕನು. ಯುದ್ಧಕ್ಕಾಗಿ ರಣರಂಗಕ್ಕೆ ಬಂದಿರುವನು. ಯುದ್ಧ ಮುಗಿದು ಕಳಿಂಗ ರಾಜನು ಸೋತರೂ ಇಂದು ಮುಂಜಾನೆ ತನಕ ಅಪ್ಪನ ಸುಳಿವಿಲ್ಲ! ಪ್ರತಿ ಮನೆಯಲ್ಲಿ ಅಪ್ಪನಿಲ್ಲ, ಅಣ್ಣನಿಲ್ಲ ಎಂಬ ಅಳು ತುಂಬಿದೆ. ಅದಕ್ಕಾಗಿ ಭೀತಿಗೊಂಡು ನಮ್ಮ ತಂದೆಯನ್ನು ಹುಡುಕುತ್ತಾ ಬಂದಿರುವೆವು. ತಾವು ನಮ್ಮ ತಂದೆಯನ್ನು ಹುಡುಕಿ ಕೊಡಿರಿ; ಬೇಡುವೆನು; (ಇಬ್ಬರೂ ಅಶೋಕನ ಪಾದಗಳನ್ನು ಗಟ್ಟಿಯಾಗಿ ಹಿಡಿಯುವರು).

ಪ್ರ: ಮಕ್ಕಳ ತಂದೆಯು ಬಹುಶಃ ಈ ಯುದ್ಧದಲ್ಲಿ ಮಡಿದಿರಬೇಕು. ಪಾಪ, ಅನಾಥ ಮಕ್ಕಳ ದುಃಖಿತ ಜೀವನ ಅಸಹನೀಯವಾಗಿರುವುದು.

ಅಶೋಕ: (ಸ್ವಲ್ಪ ದುಃಖಿತನಾಗಿ) ಮಕ್ಕಳೇ ನೀವು ನನ್ನೊಡನೆ ಬನ್ನಿರಿ. ನಾನು ನಿಮ್ಮನ್ನು ಕೊರತೆಯಾಗದಂತೆ ನೋಡಿಕೊಳ್ಳುವೆನು.

ಪ್ರಧಾನಿ: ಮಕ್ಕಳೇ ಅವರು ಮಹಾರಾಜರು. ನಿಮ್ಮನ್ನು ಮಕ್ಕಳಂತೆ ಸಲಹುವರು. ಪ್ರಜೆಗಳಿಗೆಲ್ಲ ರಾಜನಲ್ಲವೆ ತಂದೆಯು?

ಒಬ್ಬ: ರಾಜನಾದ ನಿಮಗೆ ಪ್ರತಿಯೊಂದನ್ನೂ ಮಾಡಲು ಸಾಧ್ಯವಿದೆ. ನಮ್ಮ ತಂದೆಯನ್ನೇ ನಮಗೆ ತಿರುಗಿ ಕೊಡಿಸಿರಿ. ನಿಮ್ಮ ಕೆಲಸಕ್ಕಾಗಿ ಅವನು ನಮ್ಮನ್ನು ಬಿಟ್ಟು ಬಂದಿರಲಿಲ್ಲವೇ? ನಿಮಗಾಗಿ ಯುದ್ಧ ಮಾಡಲು ಬಂದಿಲ್ಲ.........ಅದಕ್ಕೆ ಬದಲಾಗಿ ಅವನನ್ನೇ ನಮಗೆ ಹಿಂತಿರುಗಿಸಿದರೆ ಸಾಕು. ಬೇಡುವೆವು! ಇನ್ನೇನನ್ನೂ ನಮಗೆ ಕೊಡಬೇಕಾಗಿಲ್ಲ. ದಯೆ ತೋರಿರಿ.

ಅಶೋಕ: ನಿಮ್ಮ ತಂದೆಯು ಮರಳಿ ಬಾರನು! ನೀವು ನನ್ನೊಡನೆ ಬಂದರೆ, ನಿಮಗೆ ಸುಖಜೀವನ ಉಂಟಾಗುವುದು ಯಾವ ಕಷ್ಟವೂ ನಿಮಗೆ ಬರಲಾರದು.

ಇನ್ನೊಬ್ಬ: ತಂದೆಯನ್ನು ಕರೆತಾರದೆ ಹಿಂತಿರುಗುವುದಿಲ್ಲ; ಎಂದು ಅಮ್ಮನಿಗೆ ಭಾಷೆ ಕೊಟ್ಟಿರುವೆವು. ಆದುದರಿಂದ ಬರಲಾರೆವು. ಅಮ್ಮನನ್ನು ಬಿಟ್ಟು ನಿಮ್ಮೊಡನೆ ಬರಲು ನಮಗೆ ಮನಸ್ಸಿಲ್ಲ. ಅಮ್ಮನನ್ನು ನೋಡಿಕೊಳ್ಳುವವರು ಯಾರು? ಅವಳು ಅಳುತ್ತಾ ಒಬ್ಬಳೇ ಇರಬೇಕೆ? ಅಪ್ಪನನ್ನು ಕಾಣದೆ ದುಃಖಕ್ಕೀಡಾದ ಅವಳಿಗೆ ನಾವು ಕೂಡಾ ಕಾಣಿಸದಿದ್ದರೆ ಅವಳ ಗತಿಯೇನು?

ಒಬ್ಬ: "ರಾಜನಂತೆ ಇವನು! ಪ್ರಜೆಗಳ ತಂದೆಯಂತೆ! ಹಾಗಾದರೆ ನಿಮ್ಮ ಪ್ರಜೆಗಳಾದ ನಮಗೆ ಇಂತಹ ಸಂಕಷ್ಟವನ್ನು ಏಕೆ ಮಾಡಿದಿರಿ? ನಿಮ್ಮಿಂದ ಯುದ್ಧವುಂಟಾಯಿತು. ಅದಕ್ಕಾಗಿ ನಮ್ಮ ತಂದೆಯು ಮನೆಯಿಂದ ಹೊರಟನು, ಮತ್ತು ಈಗ ಕಾಣಿಸದಾಗಿರುವನು. ಮನೆಯಲ್ಲಿ ತಾಯಿಯು ಶೋಕಿಸುತ್ತಿರುವಳು. ಸುಮ್ಮನೆ ನೆಮ್ಮದಿಯಿಂದ ಜೀವಿಸುತ್ತಿದ್ದ ನಮ್ಮ ಹಾಲಿನಂತಹ ಜೀವನದಲ್ಲಿ ನಿಮ್ಮ ಯುದ್ಧದಿಂದಾಗಿ ಎಷ್ಟು ದುಃಖ ಉಂಟಾಗಿದೆ? ಇಂತಹ ಕಷ್ಟಗಳು ನಮ್ಮ ಊರಿನ ಪ್ರತಿಯೊಂದು ಮನೆಯಲ್ಲಿ ಉಂಟಾಗಿವೆ. ಇವೆಲ್ಲಕ್ಕೂ ಮೂಲಕಾರಣನು ರಾಜನಾದ ನೀನು! (ಅಷ್ಟರಲ್ಲಿ "ಬುದ್ಧಂ ಶರಣಂ ಗಚ್ಛಾಮಿ", "ಸಂಘಂ ಶರಣಂ ಗಚ್ಛಾಮಿ","ಧರ್ಮಂ ಶರಣಂ ಗಚ್ಛಾಮಿ" ಎಂದು ಹಾಡುತ್ತಾ ಮೊಗ್ಗಾಲಿ ಪುಟ್ಟಟಿಶ್ಯ ಭಿಕ್ಷುವು ಬರುತ್ತಾನೆ. ಕೂಡಲೇ ಮಕ್ಕಳಿಬ್ಬರೂ ಭಿಕ್ಷುವಿಗೆ ನಮಸ್ಕರಿಸುತ್ತಾರೆ). —— [ಸಶೇಷ]

ಸಂಸ್ಕೃತ ಲೋಕೋಕ್ತಿಗಳು

ಸಂಗ್ರಾಹಕ:
ವೈದ್ಯಗುರು ಎಂ. ಆರ್. ಭಟ್.

481 ಬ್ರಹ್ಮವಿದಾಪ್ನೋತಿ ಪರಮ್

ಬ್ರಹ್ಮಜ್ಞಾನಿಯು ಅತ್ಯಂತ ಶ್ರೇಷ್ಠವಾದುದನ್ನು ಹೊಂದುತ್ತಾನೆ.

482 ಸ ಮಾ ಭಗಪ್ರವಿಶ

ಎಲೈ ದೇವನೇ, ನನ್ನಲ್ಲಿ ನೀನು ಸೇರು.

483 ತಂ ತ್ವಾ ಭಗಪ್ರವಿಶಾನಿ

ಎಲೈ ದೇವನೇ, ನಾನು ನಿನ್ನನ್ನೇ ಸೇರಲಿ.

484 ಏಷ ಹಿ ಏವ ಆನಂದಯಾತಿ

ಆತನೇ ಆನಂದಮೂರ್ತಿಯು.

485 ಸ ಯಶ್ಚಾಯಂ ಪುರುಷೇ, ಯಶ್ಚಾಸಾವಾದಿತ್ಯೇ, ಸ ಏಕಃ

ಆತನು ಮಾನವನಲ್ಲಿರುತ್ತಾನೆ; ಸೂರ್ಯನಲ್ಲಿರುತ್ತಾನೆ; ಅವನೊಬ್ಬನೇ; ಮತ್ತಾವನೂ ಇಲ್ಲ.

486 ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ

ಬ್ರಹ್ಮಾನಂದವನ್ನು ಹೊಂದಿದ ಜಾಣನಿಗೆ ಎಲ್ಲಿಂದಲೂ ಎಂದೆಂದಿಗೂ ಭಯವಿಲ್ಲ.

487 ಸತ್ಯಂ ಜ್ಞಾನಮನಂತಂ ಬ್ರಹ್ಮ

ಬ್ರಹ್ಮವು ಸತ್ಯ; ಬ್ರಹ್ಮವು ಜ್ಞಾನವು; ಬ್ರಹ್ಮವು ಅನಂತ.

488 ಭೂತಾನಾಮಸ್ಮಿ ಚೇತನಾ

ಸಕಲ ಪ್ರಾಣಿಗಳಲ್ಲಿ ಚೇತನಾ ಸ್ವರೂಪನು ನಾನು.

489 ತದ್ಧ ತದ್ವನಂ ನಾಮ

ಪರಬ್ರಹ್ಮದ ಹೆಸರು ವನ (ಅಂದರೆ, ಆನಂದ).

490 ತದ್ವನ ಮಿತ್ಯುಪಾಸಿತವ್ಯಮ್

ಆವನ (ಆನಂದ)ದ ಉಪಾಸನೆ ಮಾಡಬೇಕು ನಾವೆಲ್ಲ.

491 ಸದ್ ಏಕಮೇವಾದ್ವಿತೀಯಮ್

ಸದ್, ಅಂದರೆ, ಇರುವಿಕೆಯು ಒಂದೇ; ಅದ್ವಿತೀಯವು ಕೂಡ (ವಿಭಜಿತವಾಗದು).

492 ತತ್ತ್ವಮಸಿ

ನೀನು ಅದಾಗಿರುತ್ತೀ.

493 ಆತ್ಮನ ಏಷ ಪ್ರಾಣೋ ಜಾಯತೇ

ಆತ್ಮನಿಂದಲೇ, ಈ ಪ್ರಾಣವು ಉಂಟಾಗಿದೆ.

494 ಮಾಯಾಂ ತು ಪ್ರಕೃತಿಂ ವಿದ್ಯಾನ್ ಮಾಯಿನಂ ತು ಮಹೇಶ್ವರಮ್

ಪ್ರಕೃತಿಯು ಮಾಯೆಯು; ಮಹೇಶ್ವರನು ಮಾಯೆಯ ಅಧಿಪತಿಯು; ಇದನ್ನು ತಿಳಿಯಬೇಕು.

495 ಸಸ್ಯಮಿವ ಮರ್ತ್ಯಃ ಪಚ್ಯತೇ ಸಸ್ಯಮಿವಾಜಾಯತೇ ಪುನಃ

ಮಾನವನು ಸಸಿಗಳಂತೆ ಬಾಳಿ, ಬೆಳೆದು, ಮರಣ ಹೊಂದುತ್ತಾನೆ; ಹಾಗೂ, ಸಸಿಗಳಂತೆ ಪುನಃ ಪುನಃ ಹುಟ್ಟುತ್ತಾನೆ.

496 ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯಚ

ಹುಟ್ಟಿದವನಿಗೆ ಮರಣವು ಖಂಡಿತ, ಮತ್ತು ಸತ್ತವನಿಗೆ ಹುಟ್ಟು ಖಂಡಿತ.

497 ಏಷ ಸರ್ವ ಭೂತಾಂತರಾತ್ಮಾ

ಈತನು ಸಕಲ ಪ್ರಾಣಿಗಳ ಅಂತರಾತ್ಮನು.

498 ತದೇತತ್ಸತ್ಯಂ ತದಮೃತಮ್

ಅದು ಇದು; ಸತ್ಯ ಹಾಗೂ ಅಮೃತ.

499 ಓ ಮಿತ್ಯೇವಂ ಧ್ಯಾಯಥ ಆತ್ಮಾನಮ್

ಓಮ್ ಎನ್ನುತ್ತ, ಆತ್ಮವನ್ನು ಧ್ಯಾನಿಸುತ್ತಿರಿ.

500 ಸತ್ಯಮೇವ ಜಯತೇ ನಾನೃತಮ್

ಸತ್ಯಕ್ಕೇನೇ ಜಯ; ಅನೃತಕ್ಕೆ ಜಯವಿಲ್ಲ.

——

● ತನ್ನಿಮಾನಿಗ ಸಿಡಿಮಿಡಿ ತಂಗಿಯಾದಳು!
● ಬಬ್ಬರ್ಯ ಒಂದೂವರೆ ಕಾಲಿನ ಭೂತವಾದನು!
● ಸುಬ್ಬಿ ಸಂಕಲೆ ಗುಳಿಗನ ಸೇರಿಕೆಗಾದಳು!

ತುಳು ಸಂಧಿಯ ಕತೆ: ೧೦

ಕೋರ್ದಪು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬಬ್ಬು ಬಾವಿಯೊಳಗಿಂದ ಕೂಗತೊಡಗಿದನು. ಅದರ ಒಳಗಿಂದ ಒಮ್ಮೆ ಎಮ್ಮೆಯ ಕರು ಅರಚಿದಂತೆ ಕೇಳಿಸುತ್ತಿತ್ತು. ಮತ್ತೊಮ್ಮೆ ಕೋಳಿ ಕೆಲೆದಂತೆ ಧ್ವನಿಸುತ್ತಿತ್ತು. ಇನ್ನೊಮ್ಮೆ ಕಾಳು ನಾಯಿ ಬೊಗಳಿದ ಹಾಗೆ ವರ್ತಿಸುತ್ತಿತ್ತು!

ಆಗ ಇಬ್ಬರು "ಬೈದೆರ್ಲ್" (ಬೈದ್ಯರು=ಕೋಟಿ ಮತ್ತು ಚೆನ್ನಯ), ಮತ್ತಿಬ್ಬರು ಮುಗ್ಗೇರರು ಬೇಟೆಗೆ ಹೋದವರು ಕಂಚಿನಡ್ಕ ಮಿಂಚಿನ ಪದವಿನ ಆ ದಾರಿಯಾಗಿ ಹಿಂತಿರುಗುತ್ತಿದ್ದರು. ತುಸು ದೂರ ಒಂದು ಮರದ ಬುಡದಲ್ಲಿ ದಣಿವಾರಿಸುವುದಕ್ಕೆ ಕೂತರು. ಅವರಿಗೆ ಬಾವಿಯ ಕಡೆಯಿಂದ ಕೂಗಾಡುವ ಧ್ವನಿ ಕೇಳಿಸಿತು. ಬೈದ್ಯರು ಕುತೂಹಲಿತರಾಗಿ ಎದ್ದು ಧ್ವನಿಯನ್ನನುಸರಿಸಿ ಅತ್ತ ನಡೆದರು. ಬಾವಿಯ ಹಾಸುಗಲ್ಲಿನ ಮೇಲೆ ನಿಂತು ಕಿವಿಯಾಲಿಸಿದರು.

"ಯಾರಪ್ಪಾ ಪುಣ್ಯಾತ್ಮರು ಮೇಲೆ ನಿಂತಿರುವವರು? ಅಯ್ಯೋ! ನನ್ನ ನೆತ್ತಿಯ ಭಾರವನ್ನೊಮ್ಮೆ ತೆಗೆದುಬಿಡಿರಿ. ಗಂಡಸಾದರೆ ನನ್ನ ಮಾವ, ನನ್ನ ಅಣ್ಣ, ನನ್ನ ತಮ್ಮಾ! ಹೆಂಗಸಾದರೆ ನನ್ನ ತಾಯಿ, ನನ್ನ ಅಕ್ಕ, ನನ್ನ ತಂಗಿ! ರಕ್ಷಿಸಿರಿ! ಹಾ........ಹಾಯ್!"

ಈ ಮೊರೆಯನ್ನು ಕೇಳಿ ಕೂಡಲೇ ಬೈದ್ಯರಿಬ್ಬರೂ ಆಚೆ-ಈಚೆ ಇಕ್ಕಡೆಯಲ್ಲಿ ನಿಂತು ತಮ್ಮ "ಸುರಿಯ" (ಖಡ್ಗ)ದ ಮೊನೆಯನ್ನು ಬಾವಿಗೆ ಮುಚ್ಚಿದ್ದ ಹಾಸುಗಲ್ಲಿನ ಅಡಿಭಾಗಕ್ಕೆ ತೂರಿ ಅದನ್ನು ಮೇಲಕ್ಕೆಬ್ಬಿಸಲು ಹವಣಿಸಿದರು. ಅವರ ಖಡ್ಗಗಳ ಮೊನೆ "ಪುಲೇವು" (ಡೊಂಕು) ಬಂತು. ತಮಗೆ ದುಸ್ಸಾಧ್ಯವೆಂದು ಕಂಡುಕೊಂಡು ಅವರು ಅಷ್ಟಕ್ಕೇ ಹೊರಟುಬಿಟ್ಟರು ಅವರು ತಾವು ಮೊದಲು ತಂಗಿದ್ದೆಡೆಗೆ ಬಂದುಕೊಂಡಾಗ, ಅಲ್ಲಿದ್ದ ಮುಗ್ಗೇರರಿಬ್ಬರು ಬೈದ್ಯರಿಂದ ಸಂಗತಿಯನ್ನರಿತು ಅವರು ಕೂಡ ಬಾವಿಯನ್ನು ಸಂದರ್ಶಿಸಿದರು. ಅಲ್ಲಿ ಬಾವಿಯೊಳಗಿಂದ ಪೂರ್ವೋಕ್ತದಂತೆ ಆರ್ತನಾದಗೈದುದನ್ನಾಲಿಸಿದರು. ಅವರು ತಮ್ಮತಮ್ಮ ಬಾಣವನ್ನು ಹುದುಗಿ ಬಂಡೆಯನ್ನೆಬ್ಬಿಸಲು ಸೆಣಸಿದರು. ಅವರ ಬಾಣಗಳು ಕೂಡ ವಕ್ರಿಸಿತು. ಅಲ್ಲಿಗೇ ಸಾಕುಮಾಡಿ ಅವರು ನೆಟ್ಟಗೇ ಹೊರಳಿ ಬೈದ್ಯರನ್ನು ಕೂಡಿಕೊಂಡರು.

ಅಷ್ಟರಲ್ಲಿ ಮುಗ್ಗೇರರ ತಂಗಿ ತನ್ನಿಮಾನಿಗಳೆಂಬವಳು ಬೇಟೆಗೆ ಹೋದ ತಮ್ಮ ಅಣ್ಣಂದಿಯರಿಗೆ ಅನ್ನದ ಬುತ್ತಿ ಮತ್ತು ಬೈದ್ಯರಿಗೆ "ದಂಡಿಬೊಂಡ" (ಜೋಡು ಸೀಯಾಳ) ತರುತ್ತಿದ್ದವಳು ಆ ಬಾವಿಯ ಪಕ್ಕದಲ್ಲಿ ಬರುತ್ತಿದ್ದಳು. ಅವಳಿಗೆ ಬಾವಿಯೊಳಗಿಂದ ಆ ನರಳಾಡುವ ಕಂಠಧ್ವನಿ ಕೇಳಿಸಿತು ಬೆಪ್ಪಳಿಸಿ ತನ್ನಿಮಾನಿಗ ಬಾವಿಗೆ ಹಾಸಿದ ಕಲ್ಲಿನ ಮೇಲೆ ನಿಂತು ಅತ್ತಿತ್ತ ನಿರುಕಿಸಿದಳು. ಬಾವಿಯೊಳಗಿಂದ ಕರುಣಾರ್ದ್ರ ವಿನಂತಿ ಹೊರಟಿತು:

"ಹಾ! ಯಾರವರು ನನ್ನ ಅಣ್ಣ-ಅಕ್ಕ-ತಮ್ಮ-ತಂಗಿ? ನನ್ನ ತಲೆಯ ಹೊರೆ ತೆಗೆಯಿರಿ! ತೆಗೆದರೆ ಮೊದಲಾಗಿ "ಬೂಲ್ಯ ಪಟ್" (ಗಂಧ ಪ್ರಸಾದ) ಕೊಡಿಸುವೆನು. ಅಂತವರಿಗೆ ನನ್ನ ಬಲ ಭಾಗದಲ್ಲಿ "ಮದಿಮಲ್ ಲಾಕಿ" (ಮೊಟ್ಟೆ ಇಕ್ಕಲಿಕ್ಕಾಗದ ಹೇಂಟೆ)ಯನ್ನು ಕೊಯ್ದು ಬಡಿಸುವೆನು."

[ಈಗಲೂ ಕೋರ್ದಪುವಿನ ಕೋಲದಲ್ಲಿ ತನ್ನಿಮಾನಿಗಳಿಗೆ ಆ ಪರಿಯ ಆದರ-ಸತ್ಕಾರಗಳಿವೆ.]

ಅಷ್ಟು ಕೇಳಿ ತನ್ನಿಮಾನಿಗ ಹದಿನಾರು ಪೊದರಿಗೆ ಸರಿದು, ಹದಿನಾರು ಹಿಡಿ "ಕೇಪುಲ" (ಕಿಸ್ಗಾರ)ದ ಹೂ ಕೊಯ್ದು ತಂದಳು. ಮೇಲೆ ಸೂರ್ಯನಾರಾಯಣ ದೇವರನ್ನು ಧ್ಯಾನಿಸಿ, ಕೆಳಗೆ ಭೂಮಿ ತಾಯಿಯನ್ನು ಸ್ಮರಿಸಿದಳು. ಹದಿನಾರು ಹಿಡಿ ಹೂವನ್ನು ಕಲ್ಲಿನ ಮೇಲೆ, ಹದಿನಾರು ಹಂತಿಮಾಡಿಟ್ಟಳು. ತನ್ನ ಉಡಿಯಿಂದ ಗೆಜ್ಜೆ ಕತ್ತಿಯನ್ನು ತೆಗೆದು ಅದರ ಮೇಲೆ ಹದಿನಾರು ಗೀರು ಎಳೆದಳು. ಕಲ್ಲು ಹದಿನಾರು ಹೋಳುಗಳಾಗಿ, ಹದಿನಾಕು ಲೋಕಕ್ಕೆ ಕುಪ್ಪಳಿಸಿ ಹಾರಿತು. ವಿಪನ್ನನ ತಲೆಯ ಹೊರೆ ತೆಗೆದಳು. ಬಬ್ಬು ಒಳಗಿನಿಂದ ನುಡಿ ಬಿತ್ತರಿಸಿದನು:

"ನನ್ನ ತಲೆಯ ಹೊರೆಯನ್ನು ನೀನು ತೆಗೆದೆ. ನನ್ನನ್ನು ಮೇಲಕ್ಕೆ ಹೇಗೆ ಎಳೆಯುವೆ?"

ತನ್ನಿಮಾನಿಗ ತಾನುಟ್ಟ ಅರುವತ್ತು ಮೊಳದ ಸೀರೆಯನ್ನು ಸೊಂಟಕ್ಕೆ ಒಂದಾವರ್ತಿಯ ಸುತ್ತುಸುರುಳು ಬಿಗಿದು, ಉಳಿದ ಭಾಗವನ್ನು ಬಾವಿ ಒಳಗೆ ಇಳಿಬಿಟ್ಟಳು.

"ಆಕಾಶಕ್ಕೆ ನೋಡಬೇಡ. ಭೂಮಿಗೆ ದಿಟ್ಟಿಸಿ ಈ ನನ್ನ ಸೀರೆಯ ತುದಿಯನ್ನು ಹಿಡಿದುಕೊಂಡು ಮೇಲೇರಿ ಬಾ."

ಬಬ್ಬು ಸೀರೆಯನ್ನು ಹಿಡಿದು ಹತ್ತಿಕೊಂಡು ಮೇಲಕ್ಕೆ ಬಂದನು. ಬಂದವನೇ ತನ್ನಿಮಾನಿಗಳನ್ನೊಮ್ಮೆ ಅಪಾದಮಸ್ತಕವಾಗಿ ದಿಟ್ಟಿಸಿ, ಮತ್ತೆ ಅವಳನ್ನು ಸ್ಪರ್ಶಿಸಲು ಮುಂಬರಿದನು. ಆಗ ತನ್ನಿಮಾನಿಗ ಕೋಪೋದ್ರೇಕಗೊಂಡು ಅವನಿಗೆ ಹೀಗೆ ಶಪಿಸಿದಳು:

"ನಾನು ನಿನ್ನನ್ನು ಮೇಲಕ್ಕೆ ಮಾಡಿದೆನು. ಆದರೆ ನೀನು ನನ್ನನ್ನು ಮುಟ್ಟಲಿಕ್ಕೆ ಬಂದೆ. ನನ್ನನ್ನು ಮುಟ್ಟಲಿಕ್ಕೆ ಬಂದ ದೋಷಕ್ಕೆ ನೀನು ಹದಿನಾರು 'ಗಡಿ' (ಗಾಯ) ತೆಕ್ಕೊಳ್ಳು."

[ಕೋರ್ದಪು ಕೋಲದಲ್ಲಿ ಈಗಲೂ ತನ್ನಿಮಾನಿಗಳನ್ನು ಕೋರ್ದಪು ಸ್ಪರ್ಶಿಸಲಿಕ್ಕಿಲ್ಲ. ಮೊಣಕಾಲೂರಿ ತಲೆಗೆ "ಕಡ್ತಲೆ" (ಖಡ್ಗ)ಯಿಂದ ಹದಿನಾರು "ಗಡಿ" ಹೊಡೆದುಕೊಳ್ಳುತ್ತಾನೆ. ಹೊಡೆದುಕೊಳ್ಳುವಾಗ ಈ ಪರಿ ಕೇಳುತ್ತಾನೆ:

"ಎರ್ತೆನಾ—ಜಪ್ಪೆಲಾ, ತಂಗಡೀ?" (ಇಳಿತವಾ-ಭರತವಾ, ತಂಗೀ?=ಕಮ್ಮಿಯೋ, ಹೆಚ್ಚೋ? ಮತ್ತೆ ಸಾಕೇ?)

"ಜಪ್ಪೆಲ್, ತಗ್ಗಾ!" (ಇಳಿತ, ಅಣ್ಣಾ!= ಸಾಲದು; ಕಡಿಮೆಯಾಯಿತು. ಮತ್ತಷ್ಟು ಹೊಡೆದುಕೋ. ಏನಾಗುವುದಿಲ್ಲ.)

ಹೀಗೆಂದು ದಿಟ್ಟೆಯಾದ ತನ್ನಿಮಾನಿಗ ಕಟುವಾಗಿ ಪ್ರತಿ ನುಡಿಯುತ್ತಾಳೆ.]

ಬಬ್ಬು ಪಾಪ ಸಂತಾಪಪಟ್ಟು ಮರುಗಿದನು. ತನ್ನಿಮಾನಿಗ ಅಂದಳು:

"ಅಣ್ಣಾ, ನೀನು ಮತ್ತು ನಾನು ಅಣ್ಣ-ತಂಗಿಯರಾಗಬೇಕು."

"ತಂಗೀ, ನಿನ್ನ 'ಬರಿಬಾಂದ್ರ' (ವಂಶ) ಯಾವುದು?"

"ನಾನು ಅಂಚನ್ನಾಳು.'

"ನಾನು ಪರ್ಕೆನ್ನಾಯ. ತಂಗೀ, ನಾನು ಯಾರು, ಗೊತ್ತೇ? ನಾನು ಒಂದೊಂದು ಯುಗದಲ್ಲಿ–ಕಾಲಭೈರವ, ವೀರಭದ್ರ, ನಾಗಬ್ರಹ್ಮರ ತಳದಲ್ಲಿ ಉಲ್ಲಾಯನಾಗಿದ್ದೆನು. ಮೂರು ಯುಗದಲ್ಲಿ ಮೂರು ದೈವವಾಗಿದ್ದೆನು. ನೀನು ಯಾರು ಗೊತ್ತೇ? ಒಂದು ಯುಗದಲ್ಲಿ ನೀನು ಹೊಸಭೂತ, ಇನ್ನೊಂದರಲ್ಲಿ ಕಲ್ಲುರ್ಟಿ, ಮತ್ತೊಂದರಲ್ಲಿ ಸತ್ಯದೇವತೆಯಾಗಿದ್ದಿ. ನೀನೇ ತಂಗಿ! ನಾನೇ ಅಣ್ಣ! ನಮ್ಮನ್ನು ಜೋಗದಲ್ಲಿದ್ದರೆ ಒಳ್ಳೆದಾಗಿ ಇರಲು ಬಿಡಲಾರರು. ನಾವು ಮಾಯೆಗೊಳಗಾಗಿ ಇರೋಣ."

ಇಬ್ಬರೂ ಮಾಯಕವಾದರು. ಊರು ಬಿಟ್ಟು ಗಟ್ಟಕ್ಕೆ ಹೋದರು. ಅಲ್ಲಿ ತುಳುನಾಡಿಗೆ ಅಸ್ಕೃದೈವಗಳು ಬಾರದ ಹಾಗೆ ಕೋಟೆ ಕಟ್ಟಿ, ಬಬ್ಬು ರೂಢಿಯಲ್ಲಿ ಕೋರ್ದಪು, ವ್ಯಾಪಕಾರ್ಥದಲ್ಲಿ ಕೋಟೆದ(ಯ) ಬಬ್ಬು ಎಂಬ ಪ್ರತಿಬಿರುದಿನಿಂದ ತನ್ನಿಮಾನಿಗಳೊಂದಿಗೆ ಪ್ರಭಾವಿತನಾದನು.

ಚಂದ್ರಮು ಸೆಟ್ಟಿ ಎಂಬಾಕೆಯೊಬ್ಬಳಿದ್ದಳು. ಅವಳಿಗೆ ಏಳು ಮಂದಿ ಅಣ್ಣಂದಿಯರಿದ್ದರು ಅವಳಿಗೆ "ಒಂಜಿ ಕಂಭ ನಲ್ಪ ಕಂಡನಿ" [ಒಂದು ಕಂಭ (ಹೆಣ್ಣು) ನಲ್ವತ್ತು ಗಂಡಂದಿಯರು] ಆಗಿದ್ದರು. ಅವಳನ್ನು ಮದುವೆ ಆದ ಆದವರೆಲ್ಲ ಸತ್ತು ಯಮಲೋಕ ಸೇರಿದರು. ಅವಳ ಮೂಗಿನೊಳಗೊಂದು "ಸಂಕಮಾಲೆ" (ಸರ್ಪ) ಇತ್ತು. ಅದು ಅವರನ್ನೆಲ್ಲ ಕಚ್ಚಿ ಕೊಂದುಬಿಟ್ಟಿತು. ತಮ್ಮ ತಂಗಿಯ ದುರ್ವಿಧಿಯನ್ನು ನೆನೆದು ಅಣ್ಣಂದಿಯರು ಪರಿಶೋಕಿಸುತ್ತಿದ್ದ ವೇಳೆಯಲ್ಲಿ, ಸುಳಿಕಲ್ಲ ಮಾದವ್ ಬ್ಯಾರಿ ಎಂಬ ಹುಳಿ, ಮೆಣಸು, ಎಣ್ಣೆ, ಬೆಲ್ಲ ಹೊತ್ತುಕೊಂಡು ಅಲೆದು ಮಾರುತ್ತಿದ್ದ ವ್ಯಾಪಾರಿಯೊಬ್ಬನು, ಆ ಮನೆಗೆ ಸಂದರ್ಶಿಸಿದನು. ಏನಾದರೂ ಕೊಂಡುಕೊಳ್ಳುವಿರೇನೆಂದು ಕೇಳಿದನು.

"ನಿನ್ನ ಹುಳಿ-ಮೆಣಸಾ, ಎಣ್ಣೆ-ಬೆಲ್ಲವಾ! ನಮ್ಮ ದುಃಖದಲ್ಲಿ ನಾವಿದ್ದೇವೆ."

ವ್ಯಾಪಾರಿ ವಿಚಾರಿಸಿದಾಗ ಅವನಿಗೆ ಅಣ್ಣಂದಿಯರು ತಮ್ಮ ದುಃಖದ ಕಾರಣವನ್ನು ಅರುಹಿದರು. ವ್ಯಾಪಾರಿ ಉದ್ಗರಿಸಿದನು:

"ಅವಳ ಜೀವಕ್ಕೆ ನಾನು ಸುಖ ಮಾಡಿದರೆ ನೀವು ನನಗೆ ಏನು ಕೊಡುವಿರಿ?"

"ನಿನಗೆ ಎಮ್ಮೆಯಾ, ಕರುವಾ ಕೊಡುತ್ತೇವೆ."

"ಅದನ್ನು ಒಯ್ದರೆ ಹುಲಿ ಬಡಕೊಂಡು ಹೋದೀತು."

"ಕಳಸಿಗೆ ತುಂಬಲಷ್ಟು ಹಣಕೊಡುತ್ತೇವೆ."

"ಅದು ನನ್ನಿಂದ ಖರ್ಚಾಗಿ ಹೋದೀತು."

"ನಿಮಗೆ ಒಂದಡಿ ಭೂಮಿ ಕೊಡುತ್ತೇವೆ"

"ಭೂಮಿಕೊಟ್ಟರೆ ಮಾರಿ ಹೋದೀತು."

"ಹಾಗಾದರೆ ನಿನಗೆ ಏನು ಕೊಡುವುದಪ್ಪಾ?"

"ಅವಳನ್ನು ಕೊಡುವಿರಾ?"

ಅಣ್ಣಂದಿಯರು ತಮ್ಮತಮ್ಮೊಳಗೆ ಸಮಾಲೋಚಿಸುವರು.

"ಹೀಗೆ ಸತ್ತುಕೊಳ್ಳುವುದಕ್ಕಿಂತ ಹಾಗಾದರೂ ಮಾಡಿಕೊಂಡು ನಮ್ಮ ತಂಗಿ ಇದ್ದುಕೊಳ್ಳಲಿ. ಜಾತಿ ಕೆಟ್ಟರೂ ಸ್ವರ್ಗಪಡೆಯಲಿ!"

ಹೀಗೆಂದು ನಿರ್ಧರಿಸಿ ಒಪ್ಪಿಗೆಯನ್ನಿತ್ತರು. ಒಂದು ಒಕ್ಕಲಿಲ್ಲದ ಮನೆಯನ್ನು ಗೊತ್ತುಮಾಡಲಾಯಿತು. ವ್ಯಾಪಾರಿ ಚಂದ್ರಮುವನ್ನು ಅಲ್ಲಿಗೆ ಕರೆದೊಯ್ದನು. ಹಿಟ್ಟಿನಿಂದೊಂದು ಗಂಡಸಿನ ತದ್ರೂಪ ಮೂರ್ತಿ, ಬಾಳೇ ಮರ ದಿಂಬಿನಿಂದ ಮತ್ತೊಂದನ್ನು ರಚಿಸಿದನು. ಆಕೆಯನ್ನು ರಾತ್ರಿಯಲ್ಲಿ ಮಂಚದಲ್ಲಿ ಮಲಗಿಸಿ ಅವಳ ಇಕ್ಕಡೆಯ ಪಕ್ಕದಲ್ಲಿ ಒಂದೊಂದು ಮೂರ್ತಿಯನ್ನು ಹಾಸಿದನು.

ನಡುರಾತ್ರಿಯಲ್ಲಿ ಆಕೆಯ ಮೂಗಿನಿಂದ ಉಗ್ರಸರ್ಪವೊಂದು ಹೊರಹೊರಟುಕೊಂಡು, ಆಚೆ-ಈಚೆ ಮಲಗಿದ್ದ ಎರಡು ಮೂರ್ತಿಗಳನ್ನು ಗಂಡಸೆಂದೇ ಊಹಿಸಿ ಕಚ್ಚಿತು. ಕೂಡಲೇ ವ್ಯಾಪಾರಿ ಸರ್ಪವನ್ನು ಬಂಧಿಸಿ, ಕತ್ತಿಯಿಂದ ಕೊಯ್ದು ಕೊಂದುಹಾಕಿದನು.

ವ್ಯಾಪಾರಿ ಚಂದ್ರಮುವನ್ನು ಮದುವೆಯಾದನು. ಅವಳಿಗೆ ಪಾತಿಮಳೆಂಬ ಬೇರೊಂದು ಹೆಸರಿಡಲಾಯಿತು. ಅವಳಿಗೆ ಬಳಿಕೊಬ್ಬ ಮಗ ಹುಟ್ಟಿದನು. ಮುಂದೆ ಈತ ಸಾರ್ತಮಲ್ಲು ಬಬ್ಬರ್ಯನೆಂಬ ಭೂತವಾದನು.

ಗಟ್ಟದಿಂದ ಇಳಿದು ತುಳುನಾಡನ್ನು ಸಂದರ್ಶಿಸಬೇಕೆಂದೊಮ್ಮೆ ಜುಮಾದಿ, ಜುಮಾದಿ ಬಂಟ, ಜಾರಂದಾಯ, ಮಲರಾಯ ಮುಂತಾದ ರಾಜದೈವಗಳಿಗೆ ಮನಸ್ಸಾಯಿತು.

ಆಗ ಬಬ್ಬರ್ಯ ಅರಬೀ ಸಮುದ್ರಕ್ಕೊಂದು ಕಾಲು, ಗಟ್ಟದ ಮೇಲೊಂದು ಕಾಲನ್ನು ನೀಡಿ, ಬರುತ್ತಿರುವ ದೈವಗಳನ್ನು ನಿರ್ಬಂಧಿಸಿದನು:

"ನನ್ನ ಕಾಲಿನ ಒಳಗಿಂದ ಹೋಗಿರಿ. ಮತ್ತಾವ ಬಗೆಯಿಂದಲೂ ನಿಮ್ಮನ್ನು ನಾನು ಸಾಗಬಿಡಲಾರೆ."

ಆಗ ಜಾರಂದಾಯ ದೈವ ಕೋರ್ದಪುವಿನ ಬಳಿಸಾರಿ ಆತನಿಗೆ ಬಬ್ಬರ್ಯನ ಉದ್ಧಟತನವನ್ನು ನಿವೇದಿಸಿದನು. ಕೋರ್ದಪು ತನ್ನಿಮಾನಿಗಳೊಂದಿಗೆ ಬಂದನು. ಕಾಲು ತೆಗೆಯಲು ಬಬ್ಬರ್ಯನಿಗೆ ಬೆಸಗೊಂಡನು. ಬಬ್ಬರ್ಯ ನಿರಾಕರಿಸಿ, ಅವನಿಗೆ ಸಾಮರ್ಥ್ಯವಿದ್ದರೆ ತನ್ನ ಕಾಲನ್ನು ತೆಗೆಯಲೆಂದನು. ಇಲ್ಲವಾದರೆ

ತನ್ನ ಕಾಲೊಳಗಿಂದ ಹೊಕ್ಕೊಂಡು ಹೋಗೆಂದು ಗುರುಗುರಿಸಿದನು. ಇದನ್ನು ಕೇಳಿ ಕೋರ್ದಪು ಪರಿಸ್ಪಣ ಬಬ್ಬರ್ಯನಿಗಿಂತಲೂ ಎರಡು ಪಾಲಷ್ಟು ಬೆಳೆದನು. ತನ್ನಿಮಾನಿಗಳಿಂದ ಕಡ್ತಲೆ ಹಿಸಕೊಂಡನು. ಅದರಿಂದ ಬಬ್ಬರ್ಯನ ಒಂದು ಕಾಲನ್ನು ಕಡಿದು ಚೆಲ್ಲಿದನು. ಅಂದಿನಿಂದ ಬಬ್ಬರ್ಯ ಒಂದೂವರೆ ಕಾಲಿನ ಭೂತವಾದನು. (ಮುಂದೆ ಮರಕಲ [ಮೊಗವೀರ]ರ ದೈವವಾಗಿ, ಕಳೆತೋರಿಸಿ ಅವರ ಕೈಯಿಂದ ಅಗ-ಭೋಗಾದಿಗಳನ್ನು ತೆಕ್ಕೊಳ್ಳುವನು.)

ತುಳುನಾಡಿಗೆ ಹೊರಡಲು ಸನ್ನದ್ಧರಾದ ರಾಜದೈವಗಳಿಗೆ ಕೋರ್ದಪು ಅಂದನು:

“ನಾನು ಮತ್ತು ತನ್ನಿಮಾನಿಗ ನಿಮ್ಮ ಸಂಗಡಬರುತ್ತೇವೆ. ನನಗೇನು ಕೊಡುವಿರಿ?”

ಅವರು ಭರವಸೆಯಿತ್ತರು:

“ನಮಗೆ ಸ್ಥಾನ, ನಿನಗೆ ‘ಕೊಟ್ಯ’ (ಮುಳಿಹುಲ್ಲ ಛಾವಣಿಯ ಚಿಕ್ಕ ಗುಡಿ). ನಮಗೆ ನೇಮವಾಗುವಾಗ ನಿನಗೆ ಕೋಲ. ನಮಗೆ ನೇಮದಲ್ಲಿ ಕಂಗಿನ ಹಾಳೆಯ ‘ಅಣಿ’ (ಹಿಂಬದಿಯ ತಲೆ ಮತ್ತು ಸೊಂಟಕ್ಕೆ ಬಿಗಿದು ಕಟ್ಟುವ ಭೂಷಣ). ನಿನಗೆ ‘ತಿರಿ’ (ತೆಂಗಿನ ಚಿಗುರು ಮಡಲು)ಯ ಅಣಿ. ನಮಗೆ ಪಂಚದೀವಟಿಗೆ. ನಿನಗೆ ಅರಿಮಡಲಿನ ಸೂಟಿ. ನಮಗೆ ಬೆಳ್ಳಿಯ ಕಡ್ತಲೆ. ನಿನಗೆ ಅಲವುಮಿಲವಿನ ಕಡ್ತಲೆ. ನಮಗೆ ಬೆಳ್ಳಿಯ ‘ಮುಗ’ (ಮುಖವಾಡ). ನಿನಗೆ ಕಂಚಿಯ ಮುಗ ಕೊಡಿಸುವೆವು.”

ಹೀಗೆ ಎಲ್ಲರೂ ತುಳುನಾಡಿಗೆ ಬಿಜಯ ಮಾಡಿದರು. ಕಡೆಂಬಿಸ್ಥಾನಕ್ಕೆ ಬಂದರು. ಈ ಸ್ಥಾನವನ್ನು ಜುಮಾದಿ ಮತ್ತು ಜಾರಂದಾಯ ದೈವಗಳಿಗೆ ನಿರ್ಮಿಸಲಾಗಿತ್ತು. ಅವರು ಕೋರ್ದಪುಗೆ ನುಡಿದರು:

“ನೀನು ಇಲ್ಲಿ ಹೊರಗಡೆ ತುಸು ಕಾದಿರು. ನಾವು ಪಂಚಾಯಿತಿಕೆಯೊಂದನ್ನು ತೀರ್ಮಾನಮಾಡಿ ಶೀಘ್ರದಲ್ಲೇ ಹಿಂತಿರುಗುತ್ತೇವೆ.”

ಅವರು ಹೋದ ಮರುಘಳಿಗೆಯಲ್ಲಿ ಕೋರ್ದಪು ಕಡೆಂಬಿಸ್ಥಾನಕ್ಕೆ ಒಕ್ಕಲಾದನು. ತೂಗು ಉಯ್ಯಾಲೆಯಲ್ಲಿ ಆಸೀನನಾದನು. ಜುಮಾದಿ, ಜಾರಂದಾಯರು ಬಂದುಕೊಂಡಾಗ, ಕೂತುಕೊಂಡು ಕಾಲಾಡಿಸುತ್ತ ಅವರಿಗೆ ಹೇಳಿದನು:

“ನೀವು ಹೋಗಿರಿ ನಾನು ಇಲ್ಲಿ ಒಕ್ಕಲಾದೆನು. ತಾರಬರಿಸ್ಥಾನ ಎಂದು ಹೇಳಿಸಿ ಅಲ್ಲಿ ಹೋಗಿ ನೀವು ಮೆರೆಯಿರಿ.”

ಅವರು ಹೋಗಿ ತಾರಬರಿಯಲ್ಲಿ “ಪೊನಿ” (ತಳ)ವೂರಿದರು ಮತ್ತು ಅಲ್ಲಿ ಜನರಿಂದ ಸ್ಥಾನಕಟ್ಟಿಸಿ ನೇಮ, ನೆರಿ, ಅಗ-ಭೋಗ ತೆಕ್ಕೊಂಡರು.

ಕೋರ್ದಪು (ಕಡೆಂಬಿ “ಸ್ಥಾನ” ಒಂದನ್ನು ಮಾತ್ರ ಬಿಟ್ಟು) ತುಳುನಾಡಿನ ಮಿಕ್ಕ ಕೇರಿಗಳಲ್ಲಿ ತನ್ನ ಕಳೆಯಿಂದ “ಕೊಟ್ಯ” ಎಂತ ಕಟ್ಟಿಸಿ ಖ್ಯಾತನಾದನು. ಮುಖ್ಯತಃ ಆತನಿಗೆ ಮಮ್ಮಾಯಿ ದೇವಿಯ ಅನುಗ್ರಹ ಬಲವಿತ್ತು.

ಮಮ್ಮಾಯಿ ತನ್ನ ಸವಾರಿಯ ವೇಳೆಯಲ್ಲೊಮ್ಮೆ ಕೋರ್ದಪುವನ್ನು ಕರೆದು ತನ್ನ ದಂಡಿಗೆಗೆ ಕೈಕೊಡಬೇಕೆಂದು ಬೆಸಸಿದಳು. ಕೋರ್ದಪು ತಾನು ನೆರವಾದರೆ, ತನಗೇನು ಕೊಡುವಿರೆಂದು ಅರಿಕೆ ಮಾಡಿದನು.

“ನನಗೆ ಚಿನ್ನದ ಹುರುಳಿ (ವೈಲಿಗೆ), ಬೆಳ್ಳಿಯ ‘ಅಜಿಕುರುವೆ’ (ಬೀಜ ಬಿತ್ತುವ ಕುಕ್ಕೆ). ನಿನಗೆ ಕಪ್ಪು ಹುರುಳಿ (ಸಿಡುಬು), ಕಂಚಿಯ ‘ಅಜಿಕುರುವೆ’ ಕೊಡುತ್ತೇನೆ. ನಿನಗೆ ಹರಕೆ ಹೇಳಿದರೆ ಸ್ವೀಕರಿಸಿ ಉಪಶಮನ ನೀಡು. ನೀನು ಬಿತ್ತಿದನ್ನು ನಾನು ಕೊಯ್ಯುವುದಿಲ್ಲ. ನೀನೇ ತೆಗೆ. ನಂಬಿದವನ್ನು ಹೂವಿನ ಹಿತ್ತಲು ಕಾಯ್ದಂತೆ ಕಾಪಾಡು.”

ಹಾಗೆ ಮಮ್ಮಾಯಿಯ ವರವನ್ನು ಸಂಪಾದಿಸಿ ಅವಳ ದಂಡಿಗೆಗೆ ಹೆಗಲು ಕೊಟ್ಟನು.

ಕೊಟ್ಯದಲ್ಲಿ ಕೋರ್ದಪುವಿನೊಂದಿಗೆ ತನ್ನಿಮಾನಿಗ ಮತ್ತು “ಕಡ್ತ್ರಾರ್ದ” (ಕಾರಣಿಕದ) ಭೂತಗಳಾದ ಸಂಕಲೆಗುಳಿಗ, ಕೊತ್ತಳಖಾನ ಗುಳಿಗ, ಗುಳಿಗ ಪಂಜುರ್ಲಿ, ಬ್ಯಾರಿಭೂತ, ಮಾಯೊಲು ಭೂತಗಳು ಇತ್ಯಾದಿ ಹೇರಳ ಚಿಲ್ಲರೆ ಭೂತಗಳು ಸಂಗಾತಿಕ ದೈವಗಳಾಗಿ ಸ್ಥಾಪಿತವಾದರು. ಅಲ್ಲದೆ ಇವರ ಸೇರ್ಪಡೆಯಲ್ಲಿ ಬಂದ ಮತ್ತೊಂದು ಹೆಣ್ಣು ದೈವ-ಸುಬ್ಬಿ (ಸುಬ್ಬಮ್ಮ) ಈಕೆಯ ಅನುಕಥನೆ ಹೀಗಿದೆ

ಸುಬ್ಬಿಯ ತಂದೆಯ ಹೆಸರು ರಾಮುಗುಳಿಗಂಡ ಅಂಜೆವು. ತಾಯಿ ಒಪ್ಪೆತ್ತಿ ಮದಿಮಲ್. ಸುಬ್ಬಿಯನ್ನು ಹಡೆದ ಕ್ಷಣದಲ್ಲೇ ತಾಯಿ ತೀರಿಕೊಂಡಳು.

ತಾಯಿ ಸತ್ತ ಮಗುವಿಗೆ, ತಂದೆ ತನ್ನ ಕಿರುಬೆರಳಿಗೆ ಪಟ್ಟೆಸುತ್ತಿ ಅದನ್ನು ಬಾಯಿಗಿತ್ತು ಚೀಪಿಸಿ ಸಂಭಾಳಿಸಿದನು. ಮಗುವನ್ನು ಎದೆಗೆ ಬಾಚಿಕೊಂಡು, ಎದೆಯನ್ನೇ ತೊಟ್ಟಿಲಾಗಿಸಿ ಸಂತಯಿಸಿದನು.

ಸುಬ್ಬಿ ದೊಡ್ಡವಳಾದಳು. ರಾಮುಗುಳಿಗಂಡ ಬಳೆಗಾರ ಕಸಬಿನವನು. ಒಂದುದಿನ ತನ್ನ ಮಗಳನ್ನು ಜತೆಗೆ ಕರಕೊಂಡು ಬಳೆಗಳನ್ನು ಮಾರುವುದಕ್ಕೆ ಹೋದನು. ಅಲೆದಲೆದು ಬರುತ್ತ ಸಂಜೆ ಪೊಸೊಟ್ಟು ಎಂಬ ಸ್ಥಳದಲ್ಲಿ ತಡೆ ಬಿಡಾರ ಊರಿದರು.

ಮರುದಿನ ಬೆಳಿಗ್ಗೆ ಸುಬ್ಬಿಯನ್ನೋರ್ವಳನ್ನೇ ಅಲ್ಲಿ ಬಿಟ್ಟು ಬಳೆ ಮಾರುವುದಕ್ಕೆ ಹೊರಟನು. ಸುಬ್ಬಿ ಅಡಿಗೆ ಮಾಡುವುದಕ್ಕೆ ನಿರತಳಾದಳು. ಒಂದು “ಕಡ್ಯ” (ಮಣ್ಣಿನ ಕೊಡ) ಎತ್ತಿಕೊಂಡು ನೀರು ತರುವುದಕ್ಕೆ ಬಾವಿಕಟ್ಟೆಗೆ ಸರಿದಳು.

ಅಲ್ಲೊಂದು ಗೋಳಿಮರದ ರೆಂಬೆಯಲ್ಲಿ ಸಂಕಲೆಗುಳಿಗ ಭೂತ ಹದ್ದಿನ ರೂಪತಾಳಿ ತಂಗಿದ್ದನು. ಸುಬ್ಬಿ ನೀರು ಮೊಗೆಯುವಾಗ, ಸಂಕಲೆಗುಳಿಗ ಅವಳನ್ನು ಬಾವಿಗೆ ನೂಕಿದನು.

ರಾಮುಗುಳಿಗಂಡ ಬಿಡಾರಕ್ಕೆ ಮರಳಿದನು. ಸುಬ್ಬಿಯನ್ನು ಕಾಣದೆ ಗಾಬರಿಪಟ್ಟನು. ಹುಡುಕುತ್ತ ಹೆಸರೆತ್ತಿ ಕರೆಯುತ್ತಿದ್ದಾಗ, ಬಾವಿಯಿಂದ ಓ ಕೇಳಿಸಿತು. ಅವನು ಬಾವಿಗೆ ಹೋಗಿ ಇಣುಕಲು ತನ್ನ ಮುದ್ದು ಕುಮಾರಿಯ ಶವವು ನೀರಿನ ಮೇಲೆ ಹಿಂಗಾರದ ಹಾಳೆಯ ಪರಿಯಲ್ಲಿ ತೇಲುತ್ತಿರುವ ಹೃದಯ ದ್ರಾವಕ ದೃಶ್ಯವು ಅವನಿಗೆ ದೃಗ್ಗೋಚರಿಸಿತು.

ಶವವನ್ನು ಮೇಲಕ್ಕೆ ಎತ್ತಲಾಯಿತು. ತಂದೆ ತಲೆತಲೆ ಬಡಿದುಕೊಂಡು ಗೋಳಾಡಿದನು.

ಶವವನ್ನು ಮಿಯಿಸಿ ಕಾಷ್ಠಕ್ಕೆ ಇಟ್ಟು ಬೆಂಕಿಕೊಡುವ ಪ್ರಸಂಗದಲ್ಲಿ ಬೇಗುದಿಗೊಂಡ ತಂದೆ ಮಗಳನ್ನುದ್ದೇಶಿಸಿ ಹೀಗೆಂದು ಕೇಳಿದನು:

‘ನೀನು ಯಾರ ‘ಎಚ್ಚಿದರ್’ (ಮೈಯಲ್ಲಿ) ಬರುವೆ, ಮಗಳೇ?”

“ನಾನು ಸಂಕಲೆಗುಳಿಗನ ಸೇರಿಕೆಯಲ್ಲಿ ಇದ್ದೇನೆ. ವರ್ಷಕ್ಕೊಮ್ಮೆ ಕೋಲ ಕಟ್ಟಿದ ನಲಿಕೆಯವನ ‘ಎಚ್ಚಿದರ್’ ಬರುವೆನು” ಎಂದು ಹೆಣ್ಣುಭೂತವಾದ ಸುಬ್ಬಿ ನುಡಿಗೊಟ್ಟಳು.

ಹೆಣ್ಣುದೈವವಾದ ಸುಬ್ಬಿಯನ್ನು ಕೋರ್ದಪುವಿನ ಕೊಟ್ಯದಲ್ಲಿ ಪ್ರತಿಷ್ಠೆ ಮಾಡಿದರು. ಕೋರ್ದಪುವಿನ ಕೋಲವಾಗುವಾಗ, ಇತರ ಸಂಗಾತಿಕ ಭೂತಗಳಿಗೆ ನಡೆಯುವ ಕೋಲಗಳೊಂದಿಗೆ ಸುಬ್ಬಿಯ ಕೋಲ ಕೂಡ ಜರಗುವಂತಾಯಿತು.

— ಎಮ್. ನಾರಾಯಣ,
ಮಂಗಳೂರು.

—೦—

ಕಂಬನಿ



ದಿವಂಗತ ಕೆ.ಎ.ದೇವದಾಸ, ಶಿರೋಮಣಿ.

ಬಹುಮುಖದ ಪ್ರತಿಭೆಯನ್ನು ಪಡೆದಿದ್ದರೂ, ನಿರಾಡಂಬರ ಜೀವಿಗಳಾಗಿ, ಸಾಹಿತ್ಯದ ಬಹುಮುಖ ಸೇವೆಯನ್ನು ಮಾಡಿ, ಸಮಾಜಕ್ಕೆ ನೀತಿ, ಆದರ್ಶ ಜೀವಿಗಳಾಗಿ ಬಾಳಿ, ಕೇವಲ 47ರ ವಯಸ್ಸು ತುಂಬಿ, ತಾ.23-10-61ರಲ್ಲಿ ಉಡುಪಿಯಲ್ಲಿ ನಿಧನರಾಗಿ, ಅಮರರಾದ, 'ಶ್ರೀ ಕೆ. ಎ. ದೇವದಾಸ, ಶಿರೋಮಣಿ' ಅವರು, ಅವರ ಬಳಗದವರಿಗೆ, ಅವರ ಗೆಳೆಯರಿಗೆ ಇನ್ನಿಲ್ಲ!

ನಮ್ಮ ಕನ್ನಡಕ್ಕಾಗಿ, ಕನ್ನಡಿಗರೊಡನೆ ಕನ್ನಡಿಗರಾಗಿ ನಿಂತು, ತನ್ನ ಜೀವನವನ್ನೇ ಮುಡಿಪಾಗಿಟ್ಟು, ಮತ್ತೆ ಮುಕ್ತಿ ಹೊಂದಿದ ಆ ಮಲೆಯಾಳಿ ಬಂಧು, "ನಮ್ಮ ಕನ್ನಡಿಗರಿಗೆ ಇಷ್ಟು ಬೇಗನೇ ಇಲ್ಲ' ಎನ್ನುವಂತಾದುದು, ನಮ್ಮ ಕನ್ನಡಿಗರ ಹಾಗೂ ಸಾಹಿತ್ಯರಂಗದ ದುರ್ದೈವವೇ ಆಗಿರುತ್ತದೆ! ಅವರ ಗೆಳೆಯರ ಬಳಗದಲ್ಲಿ, ನಾನೂ ಒಬ್ಬನಾಗಿ ಮೊದಲಿಂದಲೂ ಬಂದವನಾಗಿರುತ್ತೇನೆ.

ಶಾಂತಜೀವಿಗಳಾಗಿ, ತನ್ನ ಶಾಲೆಯ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದರು. ತನ್ನ ಶಿಷ್ಯವೃಂದವನ್ನು, ತನ್ನ ಗೆಳೆಯರ ಬಳಗವನ್ನು ಕಂಡಾಗಲೆಲ್ಲಾ, ನೆಂಟರಂತೆ ಹಚ್ಚಿಕೊಂಡು, ಹಾರ್ದಿಕವಾಗಿ, ಪ್ರೀತಿ-ವಿಶ್ವಾಸಗಳಿಂದ, ನಿಷ್ಕಪಟರಾಗಿ ಮಾತಾಡುವ ಸ್ವಭಾವ ಅವರದಾಗಿತ್ತು.

ಅವರು ದೊಡ್ಡ ಸಾಹಿತಿಗಳಾಗಿ ಸೇವೆ ಸಲ್ಲಿಸಿದ್ದಾರೆ, ಮೆರೆದಿದ್ದಾರೆ ಮೌನವಾಗಿ, ಆ ಸಾಹಿತ್ಯ ಸೇವೆಯನ್ನು ಕೈಕೊಂಡಿದ್ದಾರೆ.

ಸಾಹಿತ್ಯ ನಿಷ್ಣಾತರನ್ನು ಕಂಡರೆ, ಬಲು ಪ್ರೇಮ! ಬಲು ಆದರ! ಆಗ ತನ್ನ ಹೆಚ್ಚಿನ ಯೋಗ್ಯತೆಯನ್ನು ಹಚ್ಚಿಕೊಂಡು ಅವರನ್ನು ನೋಡಿ, ಮಾತಾಡಿಸುವುದರಲ್ಲಿ ಏನೂ ಹಿಂಜರಿಯದ ಮಧುರ ಸ್ವಭಾವವಾಗಿತ್ತು ಅವರದು. ಸಾಹಿತಿಗಳ, ಪಂಡಿತರ ಕೂಟದಲ್ಲಿ, ತಾನು ಮೇಲುಬಿದ್ದುಕೊಂಡು, ತನ್ನ ಪ್ರದರ್ಶನವನ್ನು ಮಾಡಿಸಿಕೊಳ್ಳುವ ಭಾವವೇ ಅವರಿಗಿರಲಿಲ್ಲ.

ಬಹು ಸೌಮ್ಯಹೃದಯ! ಅವರ ನಡೆ-ನುಡಿ, ಅಷ್ಟೂ ಸತ್ಯ-ಸಹಜತೆಯಿಂದ ತುಂಬಿತ್ತು.

ಇಂತಹ ಮೃದುಮಧುರ ಸ್ವಭಾವದ, ಒಬ್ಬ ಹಲವು ಭಾಷೆಯ ದೊಡ್ಡ ಸಾಹಿತಿ, ಒಬ್ಬ ದೊಡ್ಡ ಪಂಡಿತ, ಒಬ್ಬ ದೊಡ್ಡ ಅಕ್ಷರತಪಸ್ವಿ, ಅಲ್ಲದೆ ಜ್ಯೋತಿಷಿ ಹಾಗೂ ಒಬ್ಬ ಆಯುರ್ವೇದ ಔಷಧಿ ತಜ್ಞ, ನಮ್ಮೆಲ್ಲರನ್ನು ಅಗಲಿ ಹೋಗಿದ್ದಾರೆ. ಅದೂ ತನ್ನ ವೃದ್ಧಾಪ್ಯದ ಹಂತಕ್ಕೆ, ಆ ಮಟ್ಟಕ್ಕೆ ಮುಟ್ಟಬೇಕಾದ ಮುನ್ನವೇ, ಕನಸಿನಲ್ಲೂ ನಾವಾರೂ ಎಣಿಸದ ರೀತಿಯಿಂದ ಒಮ್ಮೆಗೇ ಕಣ್ಮರೆಯಾದ ಎಂದರೆ ನಮಗೆ ಸಹಿಸಲಾರದ ದುಃಖ.

ಆದರೆ, ಅವರು ಅಮರರಾಗಿದ್ದಾರೆ! 'ಜಯಂತಿ ತೇ ಸುಕೃತಿನೋ ರಸಸಿದ್ಧಾಃ ಕವೀಶ್ವರಾಃ ನಾಸ್ತಿ ತೇಷಾಂ ಯಶಃಕಾಯೇ ಜರಾಮರಣಜಂ ಭಯಂ' ಎಂದು, ಅವರು ಆ ವಿಧಾನದಿಂದ ನಿಧನರಾಗಿಲ್ಲ. ನಮ್ಮ ಈ ಶೋಕವನ್ನು ತಣಿಸಿಕೊಳ್ಳುವುದಕ್ಕೆ ಈ ಶ್ಲೋಕವೇ ನಮಗೆ ನೆರವಾಗುತ್ತದೆ.

ಕನ್ನಡ ಸಾಹಿತ್ಯವನ್ನು ಮೆರೆಸುವುದರಲ್ಲಿ, ಈ ಜಿಲ್ಲೆಯಲ್ಲಿ ಬಹುಸಮಯದಿಂದ ಅವರು ವಹಿಸಿರುವ ಪಾತ್ರ ಅಸಾಧಾರಣವಾಗಿತ್ತು. ಪ್ರಕಾಶಕ್ಕಾಗಿ ಹಾತೊರೆಯದೆ, ಅವರು ಸಾಹಿತ್ಯ ಸೇವೆಯನ್ನು ಮಾಡಿದುದೇ ಅದಕ್ಕೆ ಕಾರಣವಾಗಿರುತ್ತದೆ. ಅವೆಲ್ಲವೂ ಮತ್ತೆ ಮೊತ್ತವಾಗಿ ಸಂಗ್ರಹವಾದಾಗ, ಆ ಮಹತ್ವ ನಮ್ಮ ಜನತೆಗೆ ಗೊತ್ತಾಗಬೇಕಾಗಿದೆ.

ಅದಕ್ಕಾಗಿ ನಮ್ಮ ಜಿಲ್ಲೆಯ ಹಾಗೂ ಜಿಲ್ಲೆಯ ಹೊರಗಿನ ಯಾವ ಯಾವ ಪತ್ರಿಕೆಗಳಲ್ಲಿ ಅವರ ಯಾವ ಯಾವ ಲೇಖನ, ಕವನ, ಮೊದಲಾದ ವಿಭಿನ್ನ ಕೃತಿಗಳು ಪ್ರಕಟವಾಗಿವೆಯೋ, ಅವೆಲ್ಲವನ್ನೂ ಆ ಪತ್ರಿಕೆಯವರು ಶೋಧಿಸಿ, ಪ್ರಕಟಿಸಿ, ಜನತೆಗೆ ತೋರಿಸಬೇಕು. ಅವೆಲ್ಲಾ ಮತ್ತೆ ಒಂದೇ ಆಗಿ, ಒಟ್ಟಾಗಿ, ಹೊತ್ತಗೆಯಾಗಿ, ಸಂಗ್ರಹವಾಗಬೇಕು; ಪ್ರಕಟವಾಗಬೇಕು. ಆ ರೀತಿ ಮತ್ತೊಮ್ಮೆ ನಮ್ಮ ಸಾಹಿತ್ಯ ಭಂಡಾರದಲ್ಲಿ ಅದು ತುಂಬಬೇಕು; ಭಂಡಾರ ಬೆಳಗಬೇಕು.

ಉಡುಪಿ ಬೋರ್ಡು ಹೈಸ್ಕೂಲಿಗೆ, ಸಂಸ್ಕೃತ ಅಧ್ಯಾಪಕರಾಗಿ ಬಂದ ಇಪ್ಪತ್ತು ವರುಷಕ್ಕಿಂತಲೂ ಮಿಕ್ಕಿದ ಅವಧಿಯಲ್ಲಿ, ಅವರು ಮಾಡಿರುವ ಸಾಹಿತ್ಯ ಸೇವೆಗಾಗಿ, ಕನ್ನಡಿಗರೆಲ್ಲರೂ ಅವರಿಗೆ ಋಣಿಗಳು. ಸಂಸ್ಕೃತದ ಅವರ ಪಾಂಡಿತ್ಯ ಅದ್ಭುತವಾದದು. ಸಂಸ್ಕೃತದ ಎಷ್ಟೋ ಅಮೂಲ್ಯ ವಿಷಯಗಳನ್ನು, ತನಗೆ ಉತ್ತಮ ಕಂಡದನ್ನು, ಸಮಯ ಸಮಯದಲ್ಲಿ, ಕನ್ನಡಕ್ಕೆ ಅನುವಾದ ಮಾಡಿ, ಪತ್ರಿಕೆಗಳಲ್ಲಿ ಪ್ರಕಟಪಡಿಸಿದ್ದಾರೆ. ಅವೆಲ್ಲವನ್ನೂ ನಾವೀಗ ಸಂಗ್ರಹಿಸಬೇಕಾಗಿದೆ. ಮತ್ತೆ ಹೊತ್ತಗೆಯ ರೂಪದಲ್ಲಿ ಪ್ರಸಿದ್ಧಪಡಿಸಬೇಕಾಗಿದೆ. ಅದೇ ನಮ್ಮ ಋಣ ಪರಿಹಾರದ ಮಾರ್ಗವಾಗಿರುತ್ತದೆ.

ಅಷ್ಟೇ ಪಾಂಡಿತ್ಯವನ್ನು ಕನ್ನಡದಲ್ಲಿಯೂ, ತಮಿಳಿನಲ್ಲಿಯೂ, ಮಲೆಯಾಳದಲ್ಲಿಯೂ ಹಾಗೂ ಹಿಂದೀಯಲ್ಲಿಯೂ ಪಡೆದಿದ್ದ ಅವರು, ವಿಶೇಷವಾಗಿ ತಮಿಳು, ಮಲೆಯಾಳ ಭಾಷೆಗಳಿಂದ ಅನೇಕ ಉತ್ತಮ ಸಾಹಿತ್ಯಗಳನ್ನು ಆಯ್ದು, ಕನ್ನಡದ ಶುದ್ಧವಾದ ಭಾಷೆಯಲ್ಲಿ, ಮರ್ಯಾದೆಪೂರ್ಣವಾದ ಶೈಲಿಯಲ್ಲಿ ಅನುವಾದಿಸಿ, ಎಷ್ಟೋ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅವುಗಳನ್ನು ನಮ್ಮ ಕನ್ನಡದ ಸಾಹಿತ್ಯದ ಭಾಂಡಾಗಾರಕ್ಕೆ ತುಂಬಿ, ಅದರ ಭಾರ ಹೆಚ್ಚಿಸಿದ್ದಾರೆ. ಅದರ ತೂಕ ಏರಿಸಿದ್ದಾರೆ.

ಹಾಗೆಯೇ ಕನ್ನಡದ ಎಷ್ಟೋ ಉತ್ತಮ ಸಾಹಿತ್ಯವನ್ನು ಆಯ್ದು, ಸಮಯ-ಸಮಯದಲ್ಲಿ ತಮಿಳು, ಮಲೆಯಾಳ ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸಿ, ಕನ್ನಡ ಸಾಹಿತ್ಯದ ಪ್ರತಿಷ್ಠೆಯನ್ನು ಹೆಚ್ಚಿಸಿದ್ದಾರೆ. ಹೀಗೆ, ಕನ್ನಡ ಸಾಹಿತ್ಯದ ಉತ್ತಮತೆಗಳನ್ನು ಬೇರೆಬೇರೆ ನೆರೆಯ ಭಾಷೆಗಳಲ್ಲಿ ಮೆರೆಸಿದ, ಕನ್ನಡ ದೇವಿಯ ಪ್ರೀತಿಯ ಅಮರ ಪುತ್ರರವರು.

ಕನ್ನಡ, ಮಲೆಯಾಳಗಳಲ್ಲಿ ಅವರ ಸ್ವಂತ ವಿವಿಧ ರಚನೆಗಳೂ ತುಂಬಾ ಪ್ರಕಟವಾಗಿರುತ್ತವೆ. ಅವರ ಮನೆಯ ಮಾತು ಮಲೆಯಾಳಿ. ಅಂತಹ ಅವರ ವಿವಿಧ ರಚನೆಗಳಾವುವೆಂದು ಈಗ ಇಲ್ಲಿ ಉಲ್ಲೇಖಿಸುವುದು ನನಗೆ ಸಾಹಸದ ಕಾರ್ಯವಾಗಿದೆ. ಆದ್ದರಿಂದ ಮುಂದೆಯೇ ಅದನ್ನು ಒಟ್ಟುಗೂಡಿಸಿ, ಜನತೆಗೆ ತಿಳಿಸಬೇಕಾಗುತ್ತದೆ.

ಹೀಗೆ, ಉತ್ತಮ ಸಾಹಿತಿಗಳಾಗಿ ಬಾಳಿದ ಅವರು, ಅಷ್ಟೇ ಆಯುರ್ವೇದ, ಜ್ಯೋತಿಷ್ಯದಲ್ಲಿಯೂ ವಿಶೇಷ ಅನುಭವ ಪಡೆದವರಾಗಿರುತ್ತಾರೆ. 'ಮಲೆಯಾಳಿ' ಅನ್ನುವುದಕ್ಕಿರುವ ಆ ಸ್ವಭಾವಸಿದ್ಧ ಗುಣವನ್ನು ಹೊತ್ತುಕೊಂಡೇ ಅವರು ಉಡುಪಿಗೆ ಬಂದವರು. ಇದನ್ನೆಲ್ಲಾ ತಿಳಿದಾಗ, ಅವರ ಬಗೆಗೆ ವಿಶೇಷ ಆದರ ಉಂಟಾಗುವುದು ಸ್ವಾಭಾವಿಕವೇ ಆಗಿರುತ್ತದೆ.

ಅವರು ಜೀವಂತರಾಗಿರುವಾಗ ಅವರ ಬಹುಭಾಷಾಪಾಂಡಿತ್ಯವನ್ನೂ, ಅವರ ಉತ್ತಮ ಮನೋಮಟ್ಟವನ್ನೂ, ಅವರ ಪರಸ್ಪರ ಸಾಹಿತ್ಯಗಳ ಅನುವಾದ ಶಕ್ತಿಯನ್ನೂ ತಿಳಿದು, ನಾವು ವಿಶೇಷ ಪ್ರೋತ್ಸಾಹ ಕೊಟ್ಟಿದ್ದರೆ, ಆ ಕಾರ್ಯ ಆಗಿದ್ದರೆ, ಅಂತಹ ನೆರೆಹೊರೆಯ ಭಾಷೆಗಳ ಉತ್ತಮ ಸಾಹಿತ್ಯಗಳ ವಿನಿಮಯದ ಕಾರ್ಯಕಲಾಪಗಳು ಇನ್ನೂ ಆಗುತ್ತಿದ್ದವು! ಸಾಗುತ್ತಿದ್ದವು! ಅವುಗಳನ್ನು ನಾವು ಇನ್ನೂ ಹೆಚ್ಚಿಸಿಕೊಳ್ಳುತ್ತಿದ್ದೆವು. ಅವರು, ಸಮಾಜದ ಯಾವ ಪ್ರೋತ್ಸಾಹವು ಸಿಗದಿದ್ದರೂ, ತಮ್ಮ ಆತ್ಮತೃಪ್ತಿಗಾಗಿ, ಸ್ವಯಂ ಪ್ರೇರಿತರಾಗಿ, ಅಷ್ಟನ್ನಾದರೂ ನಮ್ಮ ಕನ್ನಡಕ್ಕಾಗಿ, ಮಾಡಿರುತ್ತಾರಲ್ಲಾ! ಅದು ನಮ್ಮ ಪುಣ್ಯ ಎಂದೇ ಈಗ ಅವರ ಬಗೆಗೆ ಭಾವಿಸಿಕೊಳ್ಳಬೇಕಾಗುತ್ತದೆ.

ಒಬ್ಬ ಮಲೆಯಾಳಿ ಬಂಧು, ಉಡುಪಿಗೆ ಬಂದು, ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ ಅಧ್ಯಾಪಕನಾಗಿ ಬಾಳಿದ! ಸಾಹಿತ್ಯದ ಸಲುವಾದ ಹಲವು ಚಿಕ್ಕ-ದೊಡ್ಡ, ಗಹನ-ಘನ, ವಿವಿಧ ಕೃತಿಗಳನ್ನೆಸಗಿದ ಬೇರೆ ಭಾಷಾಭಾಷಿಗಳಿಗೆ, ಕನ್ನಡದ ಉತ್ತಮ ಸಾಹಿತ್ಯದ ಸವಿಯನ್ನುಣ್ಣಿಸಿದ! ಮುಖ್ಯವಾಗಿ, ಅ. ನ. ಕೃ. ಅವರ ಪ್ರಖ್ಯಾತ ಕಾದಂಬರಿ 'ಸಂಧ್ಯಾರಾಗ'ದ ಸವಿಯನ್ನೇ ಮಲೆಯಾಳಿಗೆ ಉಣ್ಣಿಸಿದ. ಮತ್ತೆ ಹಾಗೆಯೇ ಕನ್ನಡಿಗರಿಗೂ, ಬೇರೆ ಭಾಷೆಗಳ ಸಾಹಿತ್ಯದ ಸವಿಯನ್ನುಣ್ಣಿಸಿದ. ವಿವಿಧ ಸ್ವಂತ ರಚನೆಗಳನ್ನೂ ರಚಿಸಿದ. ಅಂತಹ ಧೀರ, ದೀನ ಆ ಸಾಹಿತಿ, ಈಗ ಉಡುಪಿಯಲ್ಲೇ ಕಣ್ಮರೆಯಾದ ಎನ್ನುವಾಗ, 'ಕವಿ ಮುದ್ದಣ, ಸ್ವಯಂ ತೌಳವನಾಗಿದ್ದು, ಕನ್ನಡಿಗನಾಗಿಕೊಂಡು, ಉಡುಪಿಯಲ್ಲೇ ಇದ್ದು ಇದೇ ಬೋರ್ಡ್ ಹೈಸ್ಕೂಲಿನಲ್ಲೇ ಅಧ್ಯಾಪಕನಾಗಿದ್ದು ಉತ್ತಮ ಕೃತಿಗಳನ್ನು ರಚಿಸಿದ. ಆದರೆ, ಆಗ ಯಾರ ಯಾವ ದೃಷ್ಟಿಪಾತವೂ ಅವನ ಮೇಲೆ, ಅವನ ಕೃತಿಗಳ ಮೇಲೆ ಆಗಿಲ್ಲ. ಅಜ್ಞಾತ ಸ್ಥಿತಿಯಲ್ಲೇ ಬೇಗನೇ ಕಣ್ಮರೆಯಾದ. ಮತ್ತೆ ಜನರ ದೃಷ್ಟಿ ಅವನ ಮತ್ತು ಅವನ ಕೃತಿಗಳ ಕಡೆಗೆ ಹರಿಯಿತು. ಮತ್ತೆ ಅವನ ಮೂರು ಕೃತಿ ಕನ್ನಡದ ಮಹಾಮೇರು ಕೃತಿಯಾಗಿ ಪರಿಣಮಿಸಿತು. ಅವನು ಆಗ, ಸತ್ತು ಮತ್ತು ಬದುಕಿದ ಎನ್ನುವಂತೆ, ಮಹಾಕವಿಯಾಗಿ ಕಾಣಿಸಿಕೊಂಡ! ಅಮರನಾದ!' ಅನ್ನುವುದರ ಜ್ಞಾಪಕ ಬರುತ್ತಿದೆ ಈಗ.

'ಜಾತಿ ಯಾವುದೇ ಇರಲಿ, ನೀತಿ ಅದಕೂ ಮೇಲು' ಎಂಬುದನ್ನರಿತುಕೊಂಡು, ದೊಡ್ಡವರ ಬಗೆಗೆ ತಿಳಿದುಕೊಳ್ಳುವುದು ಮಹತ್ವವಲ್ಲ. ಬೇಡವೆಂದರೂ ಅದರ ಪ್ರಸಾರವಾಗಿ ಹೋಗುತ್ತದೆ! ಆದರೆ ಬೇಕೆಂದರೂ ಪ್ರಸಾರವಾಗದೆ ಇರುವ, ಈ ದೀನ ದೊಡ್ಡ ಪಂಡಿತ ಸಾಹಿತಿಯ ಬಗೆಗೆ ತಿಳಿದುಕೊಳ್ಳುವುದು, ಮಹತ್ತು ಪುಣ್ಯ ಎಂದು ಅರಿಕೆಮಾಡಿಕೊಳ್ಳುತ್ತಿದ್ದೇನೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ, ಅವರ ಬಂಧು-ಬಳಗದವರ ದುಃಖದಲ್ಲಿ, ನಾನೂ ಸಹಭಾಗಿಯಾಗುತ್ತೇನೆ.

ಕೆ. ಎಸ್. ಪದ್ಮನಾಭಾಚಾರ್ಯ,
ವಿದ್ವಾನ್.

—o—

ಸೇವಾವೇತನ: ಪಿಯರ್ಲೆಸ್ಸಿಯ ಜೆಪ್ಪು ಕಾರ್ಖಾನೆಯ 6 ಮಂದಿ ಮಹಿಳಾ ಕಾರ್ಯಕರ್ತರಿಗೆ ಕೆಲಸಬಿಡುವಾಗ 'ಸರ್ವೀಸ್ ವೇತನ'ವಾಗಿ ಒಟ್ಟು ರೂ. 700 ರಷ್ಟು ಮೊಬಲಗು ದೊರೆತಿದೆಯಾಗಿ ತಿಳಿಯಲಾಗಿದೆ.

——

ಮಹಾಭಾರತ ಕಥಾಮೃತ

(2ನೇ ಪುಟದಿಂದ ಮುಂದುವರಿದಿದೆ.)

ರುವ ಖಶ, ಝಷ, ನದ್ಯೋಪ, ಪ್ರಘಸ, ದೀರ್ಘವೇಣಿಕ, ಪಶುಪ, ಕುಲಿಂದ, ತಂಗಣ ಪರತಂಗಣ ಆದಿ ಜಾತಿಜನರನ್ನು ಜಯಿಸಿ ಅಪಾರ ರತ್ನಗಳನ್ನು ಅರ್ಜುನನು ಪಡೆದನು. ಆ ಬಳಿಕ ಅರ್ಜುನನು ಮಾಲ್ಯವಾನ ಎಂಬ ಪರ್ವತ ಶ್ರೇಣಿಯನ್ನು ಉತ್ತರಿಸಿ, ಭದ್ರಾಶ್ವವರ್ಷವನ್ನು ಪ್ರವೇಶಿಸಿದನು ಅಲ್ಲಿಂದ ಮುಂದೆ ಶೃಂಗಪರ್ವತವನ್ನು ಏರಿ, ಉತ್ತರ ಕುರು ವರ್ಷವನ್ನು ಅರ್ಜುನನು ಸೇರಿದನು.

ಈ ಪ್ರಕಾರ ಪುರುಷಸಿಂಹ ಅರ್ಜುನನು ಕ್ಷತ್ರಿಯ ರಾಜರನ್ನು ಜಯಿಸಿ ಉತ್ತರದಿಶದಲ್ಲಿ ವಿಜಯವನ್ನು ಪಡೆದು ತಿತ್ತಿರಿ, ಕಲ್ಮಷ ಸಂಗಾಪಂಖೀ ಮೊದಲಾದ ದಿವ್ಯಅಶ್ವಗಳನ್ನು ಪಡೆದು ವಿಶಾಲ ಚತುರಂಗಸೈನ್ಯ ಸಮೇತನಾಗಿ ಇಂದ್ರಪ್ರಸ್ಥ ನಗರಕ್ಕೆ ಹಿಂತಿರುಗಿದನು.

——

ಚಿತ್ರಾಂಬರ ಕುಂಚಿತ ಕೃಷ್ಣಕೇಶೋ
ಸ್ಥೂಲಾಂಗ ದೇಹಶ್ಚ ಕಫಾನಿಲಾತ್ಮಾ ।
ದೂರ್ವಾಂಕುರಾಭಃ ಕಮನೀಯ ವಿಶಾಲ
ನೇತ್ರೋ ಭೃಗುಪ್ಸ್ಸಾಧಿತ ಶುಕ್ಲವೃದ್ಧಿಃ ।
(ಮಂತ್ರೇಶ್ವರ)

ಶುಕ್ರನು ಬಗೆ ಬಗೆಯ ಬಣ್ಣಗಳಿಂದ ಕೂಡಿದ ವಸ್ತ್ರದವನೂ, ಗುಂಗುರಾದ ಕಪ್ಪು ತಲೆಕೂದಲುಳ್ಳವನೂ, ಸ್ಥೂಲವಾದ ಅವಯವ ದೇಹದಿಂದ ಕೂಡಿದವನೂ, ಕಫ ವಾಯು ಪ್ರಕೃತಿಯೂ, ಗರಿಕೆ ಹುಲ್ಲಿನ ಕಾಂತಿಯುಳ್ಳವನೂ, ಮನೋಹರವಾದ ವಿಶಾಲದಿಂದ ಕೂಡಿದ ಕಣ್ಣುಗಳುಳ್ಳವನೂ, ಶುಕ್ಲಾಧಿಕ್ಯವನ್ನು ಹೊಂದಿದವನೂ ಆಗುವನು.

ಚಾರುಃ ದೀರ್ಘಭುಜಃ ಪೃಥೂರುವದನಃ
ಶುಕ್ರಾಧಿಕಃ ಕಾಂತಿಮಾನ್
ಕೃಷ್ಣಾಕುಂಚಿತ ಸೂಕ್ಷ್ಮ ಲಂಬಿತಕಚೋ
ದೂರ್ವಾದಲ ಶ್ಯಾಮಲಃ
ಕಾಮೀ ವಾತಕಫಾತ್ಮಕೋಽತಿ ಸುಭಾ
ಗಶ್ಚಿತ್ರಾಂಬರೋ ರಾಜಸೋ
ಲೀಲಾವಾನ್ ಮತಿಮಾನ್ ವಿಶಾಲ
ನಯನಃ ಸ್ಥೂಲಾತ್ಮ ದೇಹಃ ಸಿತಃ ।
(ಸಾರಾವಲೀ)

ಶುಕ್ರನು ಮನೋಹರನೂ ದೀರ್ಘವಾದ ಭುಜದಿಂದ ಕೂಡಿದವನೂ, ದೊಡ್ಡದಾದ ತೊಡೆ ಮೊಗಗಳಿಂದ ಕೂಡಿದವನೂ, ಶುಕ್ರಾಧಿಕ್ಯವುಳ್ಳವನೂ, ಕಾಂತಿಯಿಂದ ಕೂಡಿದವನೂ, ಕಪ್ಪಾದ ಗುಂಗುರು ಮತ್ತು ಸೂಕ್ಷ್ಮವಾದ ಜೋಲು ತಲೆಕೂದಲುಳ್ಳವನೂ, ಗರಿಕೆ ಹುಲ್ಲಿನಂತೆ ಶ್ಯಾಮಲವರ್ಣದವನೂ, ಕಾಮುಕನೂ, ವಾತ ಕಫ ಪ್ರಕೃತಿಯೂ, ಅತಿ ಸೌಭಾಗ್ಯಯುಕ್ತನೂ, ವಿಚಿತ್ರವಾದ ಬಟ್ಟೆಯಿಂದ ಕೂಡಿದವನೂ, ರಾಜಸಗುಣಯುತನೂ, ಆಟದಿಂದ ಕೂಡಿದವನೂ, ಬುದ್ಧಿವಂತನೂ, ವಿಶಾಲವಾದ ಕಣ್ಣುಗಳುಳ್ಳವನೂ, ಸ್ಥೂಲವಾದ ಆತ್ಮದೇಹಗಳಿಂದ ಕೂಡಿದವನೂ ಆಗಿರುವನು.

ಭೃಗುಃ ಸುಖೀ ಕಾಂತವಪುಃ ಸುಲೋ
ಚನಃ ಕಫಾನಿಲಾತ್ಮಾಸಿತವಕ್ರ
ಮೂರ್ಧಜಃ ॥
(ಹೋರಾ)

ನೋಟೀಸು

ಪುತ್ತೂರು ಡಿ. ಮು ಕೋರ್ಟಿನಲ್ಲಿ
O. S. 169/61.

ಶ್ಯಾಂಪಣ ಬಂಟ —ವಾದಿ.
ಕುಂಞಪ್ಪ ಬ್ಯಾರಿ ಕೂಡಾ—ಪ್ರತಿವಾದಿರು.

2ನೇ ಪ್ರತಿವಾದಿ:-ಅ್ಯಸಮ್ಮ-ಅಪ್ರಾಮನೆ ಬ್ಯಾರಿ ಹೆಂಡತಿ-ವ ಅದ್ದು ಬ್ಯಾರಿ ಮಗಳು-ಬೆಟ್ಟಂಪಾಡಿ ಗ್ರಾಮದ ಬದಂತನಡ್ಕ.

ಸದ್ರಿ 2ನೇ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ನಿಮ್ಮ ತಂದೆ ವಾದಿಗೆ ತಾ. 4-7-47ಲ್ಲಿ ರೂ. 2000/-ಕ್ಕೆ ಬರಕೊಟ್ಟ ಸ್ಥಿರಾಸ್ತಿ ಅಡವು ಪ್ರಕಾರ ತಾ. 12—4—59, 12—4—60 ಮತ್ತು 12—4—61ಕ್ಕೆ ಬರತಕ್ಕ ಬಡ್ಡಿ ಬಾಕಿಗೆ ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ದಾವೆಯನ್ನು ತಾರೀಕು 7—11—61ಕ್ಕೆ ನಿಮ್ಮ ನೋಟಿಸಿನ ಬಗ್ಗೆ ಇಟ್ಟಿರುತ್ತದೆ. ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿನ್ನಾಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

(Sd.) M. Sadashiva Rao,
Vakil for Plaintiff.
ಪುತ್ತೂರು, ತಾ. 23—10—61

——

ಲೇಖಾಂಕ ೬೨೧.

ಶುಕ್ರನ ಸ್ವರೂಪ—೭.

(ಎಂ. ಸುಬ್ರಾಯನ್)

ಶುಕ್ರನು ಸುಖವಂತನೂ, ಚೆಲುವಾದ ದೇಹವುಳ್ಳವನೂ, ಒಳ್ಳೆಯ ಕಣ್ಣುಗಳಿಂದ ಕೂಡಿದವನೂ, ಕಫ ವಾತ ಪ್ರಕೃತಿಯೂ, ಕಪ್ಪು ಗುಂಗುರು ಕೂದಲುಗಳುಳ್ಳವನೂ ಆಗಿರುವನು. ಕಾವ್ಯಕರ್ತ ಎಂಬ ವಿಶೇಷ ವಿಚಾರವನ್ನು ಹೇಳಿರುವನು. ಕಾವ್ಯವನ್ನು ಬರೆಯುವವನು ಶುಕ್ರನು ಎಂದು ಸಾರ.

ಬಹುರೋಮಯುಕ್ತೋ ಸರ್ವಗುಣಾಭಿ
ರಾಮಃ
(ಸರ್ವಾರ್ಥ ಚಿಂತಾಮಣಿ)

ತುಂಬಾ ರೋಮಗಳಿಂದ ಕೂಡಿದವನೂ, ಎಲ್ಲಾ ಗುಣಗಳಿಂದ ಕೂಡಿ ಆಕರ್ಷಕತೆಯಿಂದ ಕೂಡಿದವನೂ ಆಗುವನು ಎಂಬ ವಿಶೇಷ ಫಲವನ್ನು ಸರ್ವಾರ್ಥ ಚಿಂತಾಮಣಿಕಾರನು ಹೇಳಿರುತ್ತಾನೆ.

"ಮಧುರಾಂಗಿರಾಂಚ"
(ಜಯದೇವ)

ಮಾಧುರ್ಯದ ಮಾತನ್ನು ಕೊಡುವನು.

ಶ್ಯಾಮೋವಿಕೃಷ್ಣ ಪರ್ವಕುಟಿಲಾಸಿತ
ಮೂರ್ಧಜಃ ಸುಖೀಕಾಂತಃ ।
ಕಫವಾತಿಕೋ ಮಧುರ ವಾಗ್ಭಗು
ಪುತ್ರಃ ಶುಕ್ರಸಾರಶ್ಚ ॥
(ಲಘುಜಾತಕ)

ಶುಕ್ರನು ಕಪ್ಪು ಬಣ್ಣ ವಿರಲವಾದ ಶರೀರ ಸಂಧಿಗಳಿಂದ ಕೂಡಿದವನೂ, ಕಪ್ಪು ಮತ್ತು ವಕ್ರವಾದ ತಲೆಕೂದಲುಳ್ಳವನೂ, ಸುಖಿಯೂ, ಚೆಲುವನೂ, ಕಫ ವಾತಗಳಿಂದ ಕೂಡಿದವನೂ, ಮಧುರವಾದ ಮಾತುಳ್ಳವನೂ, ಶುಕ್ರಬಲಯುಕ್ತನೂ ಆಗಿರುವನು.

ಅಸಿತಕುಟಿಲಕೇಶಃ ಶ್ಯಾಮಸೌಂದರ್ಯ
ಶಾಲೀ
ಸಮತರ ರುಚಿರಾಂಗಃ ಸೌಮ್ಯದೃಕ್ಕಾ
ಮಶೀಲಃ ।
ಅತಿಪವನ ಕಫಾತ್ಮಾ ರಾಜಸಃ
ಶ್ರೀನಿಧಾನಃ
ಸುಖಬಲ ಸುಗುಣಾನಾಮಾಕರಶ್ಚ
ಸುರೇಜ್ಯಃ ॥
(ವೈದ್ಯನಾಥ)

ಶುಕ್ರನು ಕಪ್ಪು ಗುಂಗುರು ತಲೆಕೂದಲಿನವನೂ, ಶ್ಯಾಮಲವರ್ಣದವನೂ, ಸೌಂದರ್ಯದಿಂದ ತುಂಬಿದವನೂ, ಸಮಕಟಾದ ಚೆಲುವಿನ ದೇಹದಿಂದ ಕೂಡಿದವನೂ, ಚೆಲುವಾದ ಕಣ್ಣುಳ್ಳವನೂ, ಕಾಮಶೀಲನೂ, ಬಹು ವಾತ ಕಫಯುಕ್ತನೂ, ರಾಜಸಗುಣಯುತನೂ, ಸಂಪತ್ತಿನ ನಿಧಿಯೂ, ಸುಖ, ಬಲ, ಒಳ್ಳೆಯ ಗುಣಗಳ ಗನಿಯೂ ಆಗಿರುವನು.

William Lily: Whether the man or woman has a good and fair sound visage, a full eye usually we say goggle-eyed; red ruddy lips the nethor more thick or longer than the upper, the eyelids black yet lovely and graceful, the hair of lovely colour (but most part according to the sign as before repeated) in some it is coal black, in others a light brown, a soft smooth hair and the body extremely well shaped even rather inclining to shortness than tallness.

Zekeel says:

We have always observed that the venus causes dimples and a smiling face

Corporature—A man of fair but not tall stature his complexion being white, tending to a little darkness which makes him more lovely eyes and sometimes black round face and not large, fair hair, smooth and plenty of it is usually of a light brown colour, lovely lips, the face pretty fleshy, a rolling wandering eye, a body very delightful, lovely, and exceedingly well shaped one desirous of trimming and making himself neat and complete, both in clothers and body a love dimple in his cheeks a steadfast eye and full of amorous enticements ***oriental*** when oriental, the body inclines to tallness, or kind of upright straightness in person, not corpulent or very tall, but neatly composed, a right venus person is pretty complete handsome man or woman (ಸಕೇಶ)

——

ಹೊಕ್ಕಿ: ಪ್ರೊ। ಎಂ. ಜಿ. ಎಸ್. ಸ್ಮಾರಕ ಯುನಿವರ್ಸಿಟಿ ವಲಯ ಹೊಕ್ಕೀ ಪಂದ್ಯಾಟದಲ್ಲಿ ಮಡಿಕೇರಿ ಸರಕಾರೀ ಕೊಲೇಜಿನವರು ಮಂಗಳೂರು ಸೈಂಟ್ ಎಲೋಸಿಯಸ್ ಕೊಲೇಜ್‌ದವರನ್ನು 1-0 ಗೋಲಿನಿಂದ ಸೋಲಿಸಿದರು.

——

ಈ ವಾರದ ಭವಿಷ್ಯ

ಶ್ರೀ ಎಸ್. ಸುಬ್ರಾಯನ್,
ಸಾಹಿತ್ಯ ಮತ್ತು ಜ್ಯೋತಿಷ್ಯ ಶಿರೋಮಣಿ.
ತಾರೀಕು ೫—೧೧—೧೯೬೧ರಿಂದ
ತಾ. ೧೧—೧೧—೧೯೬೧ರ ವರೆಗೆ.

ಮೇಷ: ಹೊಸ ಏಣಿಕೆಯಿಂದ ಕೂಡಿದವರಾಗಿದ್ದು ಅವನ್ನು ಸಾಧಿಸಲಿರುವ ಯತ್ನಯುಕ್ತರಾಗುವಿರಿ. ಬಂಧುಜನರ ಸಹಾಯ ಉಂಟಾಗಲಿರುತ್ತದೆ. ಸಂಪತ್ತಿನಿಂದ ಉನ್ನತಿಗಿರುವ ಸಂಘಟನೆಯುಳ್ಳವರಾಗುವಿರಿ. ರಿಕಾರ್ಡ್ ವ್ಯವಹಾರಗಳು ಮುಂದುವರಿಯುವವು. ಪ್ರಯಾಣವಿದೆ.

ವೃಷಭ: ನಿರಂತರ ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮ ಕಡಮೆಯಾಗಿರುವುದು. ದೂರಗತ ಬಂಧುಜನರ ಭೇಟಿಯನ್ನು ಹೊಂದಲಿರುವಿರಿ. ವಾಸಸ್ಥಾನದ ಬದಲಾವಣೆಯನ್ನು ಮಾಡಲಿರುವ ಯೋಗವಿದೆ. ವಿದ್ಯಾಜೀವನದವರು ಅಭಿವೃದ್ಧಿಯಿಂದ ಕೂಡಿದವರಾಗಲಿರುವರು.

ಮಿಥುನ: ಸಾಮೂಹಿಕ ವಿಷಯಗಳಲ್ಲಿ ಆಸಕ್ತಿಯು ಕಂಡುಬರುವುದಾಗಿದೆ. ಹಿರಿಯರ ಆರೋಗ್ಯದ ಸ್ಥಿತಿಯು ಉತ್ತಮವಾಗಿರುವುದಿಲ್ಲ. ದೂರಗತ ಬಂಧುಜನರ ಸುಖವಾರ್ತೆಯನ್ನು ಹೊಂದಲಿರುವ ಯೋಗವಿರುತ್ತದೆ. ಪ್ರಯಾಣವಾಗಲಿದೆ.

ಕರ್ಕಟಕ: ಹೊಸ ಘಟನೆಯಿಂದ ಕೂಡಿದವರಾಗಿರುವಿರಿ. ದೊಡ್ಡ ಮನುಷ್ಯರ ಭೇಟಿಯನ್ನು ಹೊಂದಲಿರುವಿರಿ. ಹಿರಿಯರ ಆರೋಗ್ಯದ ನೆಲೆಯು ಉತ್ತಮವಾಗಿರುವುದಿಲ್ಲ. ವಾಗ್ವಾದಗಳು ಸಂಭವಿಸದಂತೆ ಜಾಗರೂಕರಾಗಿರಬೇಕು. ನೌಕರರಿಗೆ ಪ್ರಗತಿಯಾಗಲಿರುವುದು.

ಸಿಂಹ: ಸಾಮುದಾಯಿಕದಲ್ಲಿ ಉತ್ತಮ ಸ್ಥಾನಮಾನಗಳು ಕಂಡುಬರುವವು. ದೂರಗತ ಬಂಧುಜನರ ಭೇಟಿಯಾಗಲಿರುತ್ತದೆ. ವಿದ್ಯಾಜೀವನದವರು ಅಭಿವೃದ್ಧಿಯಿಂದ ಕೂಡಿದವರಾಗುವರು. ವಾಸಸ್ಥಾನದ ಬದಲಾವಣೆಯುಂಟಾಗಲಿರುತ್ತದೆ.

ಕನ್ಯಾ: ಹಿಡಿದ ಕೆಲಸಗಳೆಲ್ಲಾ ಅಭಿವೃದ್ಧಿಯಿಂದ ಕೂಡಿದವುಗಳಾಗುತ್ತವೆ. ಕೌಟುಂಬಿಕ ವಾತಾವರಣವು ಚೆನ್ನಾಗಿರುವುದಿಲ್ಲ. ರಿಕಾರ್ಡ್ ವ್ಯವಹಾರಗಳು ಮುಂದುವರಿಯಲಿರುತ್ತವೆ. ಕನ್ನಿಕೆಯರಿಗೆ ವರಾವಲೋಕನೆಯಾಗಲಿರುವ ಯೋಗವಿದೆ.

ತುಲಾ: ಜೀವನದಲ್ಲಿ ಪ್ರಗತಿಗಿರುವ ಸಂಪರ್ಕಯುಕ್ತರಾಗುವಿರಿ. ದೂರಗತ ಬಂಧುಜನರ ಸುಖವಾರ್ತೆಯನು ಹೊಂದಲಿರುವಿರಿ. ಕೋರ್ಟ್ ವ್ಯವಹಾರಗಳು ಮುಂದುವರಿಯುವವು. ವ್ಯಾಪಾರಿಗಳು ಉನ್ನತಿಯಿಂದ ಕೂಡಿದವರಾಗುವರು.

ವೃಶ್ಚಿಕ: ನಿಮ್ಮ ಮನಸ್ಸು ಶಾಂತಿಯಿಂದ ಕೂಡಿರುವುದಿಲ್ಲ. ದೊಡ್ಡ ಮನುಷ್ಯರ ಸ್ನೇಹ ಸಹಾಯಗಳು ಸಂಭವಿಸುವವು. ಧಾರ್ಮಿಕ ವಿಷಯಗಳಿಗಾಗಿ ಧನವ್ಯಯವಾಗಲಿರುವುದು. ವಾಸಸ್ಥಾನದ ಬದಲಾವಣೆಯನ್ನು ಮಾಡಲಿರುವಿರಿ.

ಧನು: ಹೊಸ ಘಟನೆಯಿಂದ ಕೂಡಿದವರಾಗಿ ಕಂಡುಬರುವಿರಿ ಧಾರ್ಮಿಕ ವಿಷಯಗಳಲ್ಲಿ ಆಸಕ್ತಿಯು ಕಂಡುಬರುವುದಾಗಿದೆ. ದೇಹಾರೋಗ್ಯ ವಿಷಯದಲ್ಲಿ ಜಾಗರೂಕತೆಯುಳ್ಳವರಾಗಬೇಕು. ವಿದ್ಯಾಜೀವನದವರು ಉನ್ನತಿಯಿಂದ ಕೂಡಿದವರಾಗುವರು. ವ್ಯಾಪಾರಿಗಳು ಅಭಿವೃದ್ಧಿಯುಳ್ಳವರಾಗುತ್ತಾರೆ.

ಮಕರ: ಮಾನಸಿಕ ಶಾಂತಿಯು ಕಡಮೆಯಾಗಿರುತ್ತದೆ. ಬಂಧುಜನರ ಅಗಲುವಿಕೆಯನ್ನು ಹೊಂದಲಿರುವಿರಿ. ಕೋರ್ಟ್ ವ್ಯವಹಾರಗಳು ಮುಂದುವರಿಯಲಿರುತ್ತವೆ ಕುಟುಂಬದಲ್ಲಿ ಶುಭಕೆಲಸಗಳು ನಡೆಯಲಿರುತ್ತವೆ. ವ್ಯಾಪಾರಿಗಳು ಅಭಿವೃದ್ಧಿಯಿಂದ ಕೂಡಿದವರಾಗುವರು. ನೌಕರರಿಗೆ ಪ್ರಗತಿಯಾಗಲಿದೆ.

ಕುಂಭ: ಮಾನಸಿಕ ಶಾಂತಿ ಕಡಮೆಯಾಗಿರುತ್ತದೆ. ಸಂಪತ್ತಿನ ವ್ಯವಹಾರಗಳು ಅಧಿಕವಾಗಿ ನಡೆಯಲಿರುವವು. ಕುಟುಂಬದಲ್ಲಿ ಶುಭಕೆಲಸಗಳು ನಡೆಯಲಿರುತ್ತವೆ. ದೇಹಾರೋಗ್ಯ ವಿಷಯದಲ್ಲಿ ಜಾಗರೂಕತೆಯಿಂದ ಕೂಡಿದವರಾಗಿರಬೇಕು. ಪ್ರಯಾಣವಿದೆ

ಮೀನ: ನಿಮ್ಮವರೇ ನಿಮಗೆ ವಿರೋಧಿಗಳಾಗಿ ಕಂಡುಬರುವರು. ಸಂಪತ್ತಿನಿಂದ ಉನ್ನತಿಗಿರುವ ಸಂಪರ್ಕಯುಕ್ತರಾಗುವಿರಿ. ಧಾರ್ಮಿಕ ವಿಷಯದಲ್ಲಿ ಆಸಕ್ತಿಯು ಬಹಳವಾಗಿರುತ್ತದೆ. ವ್ಯಾಪಾರಿಗಳು ಅಭಿವೃದ್ಧಿಯಿಂದ ಕೂಡಿದವರಾಗುವರು. ನೌಕರರಿಗೆ ಸ್ಥಾನಾಂತರವು ಉಂಟಾಗಲಿರುವುದು.

—

ಕೇರಂದಲ್ಲಿ ಪ್ರಶಸ್ತಿ: ಫ್ರೆಂಡ್ಸ್ ಆರ್ಟ್ಸ್ ಕ್ಲಬ್ಬಿನ ಆಶ್ರಯದಲ್ಲಿ ಜರಗಿದ ದಸರಾ ಕೇರಮ್ಸ್ ಸಿಂಗಲ್ಸ್‌ದಲ್ಲಿ ಬೋಳಾರ ಯೂತ್ ಕ್ಲಬ್ಬಿನ ಶ್ರೀ ಜಯರಾಮರು ಪ್ರಥಮ ಬಹುಮಾನ ಪಡೆದಿರುವರು. ——

ವಾರದ ಪ್ರಭಾತ ಪಂಚಾಂಗ

(ತುಲಾ, ಆಶ್ವೀಜ–ಬಹುಳ)

ತಾರೀಕು	ವಾರ	ತಿಥಿ		ನಿತ್ಯ ನಕ್ಷತ್ರ	ಯೋಗ	ಕರಣ	ವಿಷ	ಅಮೃತ	ಮಹಾನಕ್ಷತ್ರ
		ಸೌರ	ಚಾಂದ್ರ						
5	ರವಿ	೨೦	ದ್ವಾ ೧೭।	ಉತ್ತ ।।।	ವೈ ೫	ತೈ ೧೭।	೨೩।।	೪೯।।	ಸ್ವಾತಿ ೫೦।।
6	ಚಂದ್ರ	೨೧	ತ್ರ ೨೦।।	ಹ ೫।।।	ವಿ ೫	ವ ೨೦।।	೨೭	೫೨।।	೫೫
7	ಕುಜ	೨೨	ಚ ೨೨।	ಚಿ ೯।	ಪ್ರೀ ೪	ಶ ೨೨।	೩೨।।।	೪೮।।	೫೯।।
8	ಬುಧ	೨೩	ಅ ೨೨।।	ಸ್ವಾ ೧೧।	ಆ ೧।।। ಉ ೫೬।।।	ನಾ ೨೨।।	೨೫।।	೪೯।।।	ವಿಶಾಖಾ ೪
9	ಗುರು	೨೪	ಪಾ ೨೧।।	ವಿ ೧೨।	ಶೋ ೫೪।	ಬ ೨೧।।	೨೭	೪೬	೮।।
10	ಶುಕ್ರ	೨೫	ಬಿ ೧೯।।	ಅ ೧೦।।।	ಆ ೪೯।	ಕೌ ೧೯।।	೨೫।।	೪೯।	೧೩
11	ಶನಿ	೨೬	ತ ೧೬।।	ಜ್ಯೇ ೧೦।।।	ಸು ೪೩।।।	ಗ ೧೬।।।	೩೦।	೫೦।।	೧೭

ತಾ 7, ಮಂಗಳವಾರ ನರಕ ಚತುರ್ದಶಿ. ಬುಧವಾರ ದೀಪಾವಳೀ ಅಮಾವಾಸ್ಯೆ, ಗುರುವಾರ ಅಂಗಡಿಪೂಜೆ.

ಕೂಟಗ್ರಾಮದ ಪ್ರಸಿದ್ಧ ಕ್ಷೇತ್ರಗಳು

ಶ್ರೀ ಕೋ. ಶ. ಕಾರಂತ, ಬಿ ಎ., ಬಿ.ಎಲ್., ಎಡ್ವಕೇಟ್, ಮಂಗಳೂರು.

ಹಲವಾರು ಅಂಶಗಳಲ್ಲಿ ವಿಶಿಷ್ಟವಾದ ಜನಜೀವನವುಳ್ಳ 'ಕೋಟ ಜಗತ್ತಿ'ನ ಜನರ ಧಾರ್ಮಿಕ ಜೀವನವನ್ನು ರೂಪಿಸಿದ ಪವಿತ್ರ ಕ್ಷೇತ್ರಗಳ ಪೌರಾಣಿಕ ಹಾಗೂ ಐತಿಹಾಸಿಕ ಪರಿಚಯವನ್ನು ಸಂಶೋಧಕ ಲೇಖಕರು ಇಲ್ಲಿ ಮಾಡಿಕೊಟ್ಟಿದ್ದಾರೆ.

ಪರಶುರಾಮನು ಸಾಗರರಾಜನಿಂದ ಪಡೆದ ಭೂಭಾಗದ ದಕ್ಷಿಣದಲ್ಲಿ ಸೀತಾ ನದಿಯು ವ್ಯಾಪಿಸಿರುವ ಪ್ರದೇಶವೇ "ಕೂಟಗ್ರಾಮ".

ಯಸ್ಮಿನ್ ಚಕ್ರುಸ್ತವಃ ಕೂಟಂ
ಮುನಯಃ ಕೂಟವಾಸಿನಃ
ತತ್ಕೂಟಾಖ್ಯೇ ಮಹಾಕ್ಷೇತ್ರೇ
ತಸ್ಮಿನ್ ಕುರ್ವತಸ್ತಪಃ ।

ಮುನಿಗಳು ಕೂಟವಾಗಿ, ನೆಲಸಿ, ತಪಸ್ಸನ್ನಾಚರಿಸುತ್ತಿದ್ದುದರಿಂದ ಈ ಪ್ರದೇಶಕ್ಕೆ "ಕೂಟ" ಎಂಬ ಹೆಸರು ಬಂತು. ಅನಾದಿಕಾಲದಿಂದಲೂ ಇದು ಮಹಾ ಕ್ಷೇತ್ರ.

ವಿಸ್ತಾರವಾದ ಕದಂಬರಾಜ್ಯವು ಈ ಪ್ರದೇಶವನ್ನೂ ಆವರಿಸಿತ್ತು. ಕದಂಬ ವಂಶದ ವಸುರಾಜನ ಮಗಳು ಸೂರ್ಯ ವಂಶದ ಹೇಮಾಂಗ ರಾಜನನ್ನು ವರಿಸಿದಳು. ಇವಳಲ್ಲಿ ಜನಿಸಿದ ಮಗನೇ ಮಯೂರವರ್ಮ. ಅವನು "ಶೂದ್ರ ಪ್ರಾಯಾನ್ ದ್ವಿಜಾನ್ ಪ್ರೇಕ್ಷ್ಯ"— ಶೂದ್ರಪ್ರಾಯರಾದ ಬ್ರಾಹ್ಮಣರು ಮಾತ್ರ ತನ್ನ ರಾಜ್ಯದಲ್ಲಿರುವುದನ್ನು ನೋಡಿ ಮುನಿಶ್ರೇಷ್ಠರಾದ ಕಶ್ಯಪರ ಹಿತವಚನದಂತೆ ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆತಂದು, ತನ್ನ ರಾಜ್ಯವನ್ನು ಮೂವತ್ತೆರಡು ಗ್ರಾಮಗಳಾಗಿ ವಿಭಾಗಿಸಿ ಸ್ಥಾಪಿಸಿದನು.

ಮಯೂರವರ್ಮನು ನಿರ್ಮಿಸಿದ ಮೂವತ್ತೆರಡು ಗ್ರಾಮಗಳಲ್ಲಿ ಕೂಟ ಗ್ರಾಮವು ಒಂದಾಗಿದೆ. ಸಹ್ಯಾದ್ರಿ ಉತ್ತರಖಂಡದಲ್ಲಿ ಕೂಟಗ್ರಾಮವನ್ನು ಈ ಪ್ರಕಾರ ನಿರೂಪಿಸಿದೆ.

ಗ್ರಾಮಮೇಕಂ ಚಕಾರಾಸೌ
ಸಂಸ್ಥಾಪ್ಯವಿಧಿವನ್ನೃಪಃ ।
ತನ್ಮಧ್ಯೇ ಗಜಪೂರ್ಯಾಂಚ
ನೃಸಿಂಹಶ್ಚ ಪ್ರತಿಷ್ಠಿತಃ ॥
ಪ್ರಾಚ್ಯಾಂ ಸಿದ್ಧೇಶ್ವರೋ ಯತ್ರ
ಲವಣಾಂಬುಧಿಃ ।
ಉತ್ತರೇ ಕೋಟಿಲಿಂಗೇಶೋ ಯತ್ರ
ಸೀತಾಸ್ತಿ ದಕ್ಷಿಣೇ ॥

ಪೂರ್ವದಲ್ಲಿ ವಡ್ಡರ್ಸೆಗ್ರಾಮದಲ್ಲಿರುವ ಚರ್ಪಟಸಿದ್ಧೇಶ್ವರನೂ, ಪಶ್ಚಿಮದಲ್ಲಿ ಲವಣಾಂಬುಧಿಯೂ (ಈಗಿನ ಅರಬಿಸಮುದ್ರ) ಉತ್ತರದಲ್ಲಿ ಕೋಟಿಲಿಂಗೇಶ್ವರನೂ ಮತ್ತು ದಕ್ಷಿಣದಲ್ಲಿ ಸೀತಾನದಿಯೂ ಮೇರೆಗಳಾಗಿರುವುದೇ ಲೋಕದಲ್ಲಿ ವಿಖ್ಯಾತವಾಗಿರುವ "ಕೂಟಗ್ರಾಮ" ಎಂದು ಸಹ್ಯಾದ್ರಿಯು ನಿರೂಪಿಸಿದೆ.

ಈ ಕೂಟಗ್ರಾಮದಲ್ಲಿ 'ಸಾಲಿಗ್ರಾಮ' ಎಂಬ ಮಹಾಕ್ಷೇತ್ರವಿದೆ. ಪೂರ್ವದಲ್ಲಿ ಇಲ್ಲೊಂದು ಅಶ್ವತ್ಥಮರವಿತ್ತು. ಅದರಲ್ಲಿ ಶಂಖ ಚಕ್ರಧಾರಿಯಾದ ಯೋಗಾನಂದ ಶ್ರೀ ನೃಸಿಂಹನ ಸಾಲಿಗ್ರಾಮ ಶಿಲಾಮೂರ್ತಿಯಿತ್ತು. ಕೂಟ ಮಹಾಕ್ಷೇತ್ರದ ಸಂದರ್ಶನಕ್ಕೆ ಬಂದಿದ್ದ ನಾರದ ಮುನಿಗಳು ಈ ಮೂರ್ತಿಯನ್ನು ಪ್ರತಿಷ್ಠೆ ಮಾಡಿದ್ದರೆಂದು ಶ್ರೀ ಸಾಲಿಗ್ರಾಮ ಕ್ಷೇತ್ರಮಹಾತ್ಮ್ಯೆಯು ನಿರೂಪಿಸಿದೆ.

ಕೂಟಗ್ರಾಮದ ಗಜಪುರಿ ಎಂದು ಕರೆಯಲ್ಪಡುವ ಈ ಸಾಲಿಗ್ರಾಮ ಕ್ಷೇತ್ರದಲ್ಲಿದ್ದ ಶ್ರೀನೃಸಿಂಹನನ್ನು ಮಯೂರವರ್ಮನು ಪುನಃ ಪ್ರತಿಷ್ಠೆ ಮಾಡಿದನೆಂದು ಮೇಲಿನ ಸಹ್ಯಾದ್ರಿಯ ಶ್ಲೋಕಾರ್ಥ.

ವಸುಮತಿ ರಾಜನ ಕಾಲದಲ್ಲಿ ಈಗಿನ ಮಣೂರು ಗ್ರಾಮಕ್ಕೂ, ತೆಕ್ಕಟ್ಟೆ ಗ್ರಾಮಕ್ಕೂ ನಡುವೆ ಇರುವ ಭೂಭಾಗದ ಸಂಬಂಧ ಹುಟ್ಟಿದ ವಿವಾದದ ಕಾರಣದಿಂದ ಕೂಟಗ್ರಾಮದ ಉತ್ತರ ಮೇರೆಯಾದ ಧ್ವಜೇಶ್ವರ–ಕೋಟೀಶ್ವರವನ್ನು—ತ್ಯಜಿಸಿ ವಿವಾದ ಸ್ಥಳದ ಬಳಿಯಿದ್ದ ಕಟ್ಟೆಯೇ ಉತ್ತರಮೇರೆಯಾಗಿ ಪರಿಣಮಿಸಿತು.

ಮಯೂರವರ್ಮನ ಮಗ ಚಂದ್ರಾಂಗನು ಚಿಕ್ಕವನಾಗಿದ್ದನು. ಮಂತ್ರಿಯು ಬ್ರಾಹ್ಮಣರ ಯೋಗಕ್ಷೇಮವನ್ನು ನೋಡದಿರಲಾಗಿ ಆ ಬ್ರಾಹ್ಮಣರು ಅಹಿಚ್ಛತ್ರಕ್ಕೆ ಹಿಂತಿರುಗಿದರು. ತಿರುಗಿ ಈ ದೇಶವು ಅಬ್ರಾಹ್ಮಣ್ಯರಾಜ್ಯವಾಯಿತು. ಈ ಚಂದ್ರಾಂಗನ ಮಗನಾದ ಲೋಕಾದಿತ್ಯನು ಅಹಿಚ್ಛತ್ರಕ್ಕೆ ಹೋಗಿ ವಿಪ್ರಾಗ್ರಣಿಯಾದ ಭಟ್ಟಾಚಾರ್ಯನನ್ನು ಅನೇಕ ಕಾಲ ಸೇವೆಮಾಡಿದನು. ಒಂದು ರಾತ್ರಿ ಭಟ್ಟಾಚಾರ್ಯನಿಗೆ ಸ್ವಪ್ನದಲ್ಲಿ ಗಜಾನನು ಪ್ರತ್ಯಕ್ಷನಾಗಿ "ನೀನು ಲೋಕಾದಿತ್ಯ ಭಕ್ತನೊಡನೆ ಹೋಗಿ, ಗಜೇಂದ್ರ ಮತ್ತು ಮೃಗೇಂದ್ರ ಇವೆರಡು ನೆಲಸಿರುವ ನಿರ್ವೈರವಾದ ನನ್ನ ಕ್ಷೇತ್ರದಲ್ಲಿ ನನ್ನ ದರ್ಶನವನ್ನು ಪಡೆ" ಎಂದು ನುಡಿದಂತೆ ಕೇಳಿಸಿತು. ಆದ್ದರಿಂದ ಭಟ್ಟಾಚಾರ್ಯನು ಗ್ರಾಮಗಳನ್ನು ಲೋಕಾದಿತ್ಯನಿಂದ ನಿರ್ಮಿಸಿ, ಕರೆತಂದ ಬ್ರಾಹ್ಮಣರನ್ನು ಸ್ಥಾಪಿಸಿದನೆಂದು ಶ್ರೀ ಸಾಲಿಗ್ರಾಮ ಮಹಾತ್ಮ್ಯೆಯಲ್ಲಿಯೂ ಲೋಕಾದಿತ್ಯ ಪದ್ಧತಿಯಲ್ಲಿಯೂ ಹೇಳಿದೆ. ಆದ್ದರಿಂದಲೇ ಈ ಮಹಾತ್ಮ್ಯೆಯ ಆದಿಶ್ಲೋಕವು ಎಲ್ಲರಿಗೂ ಶುಭವನ್ನು ಈ ಪ್ರಕಾರ ಕೋರಿದೆ.

ಗಜೇಂದ್ರಸ್ಯ ಮೃಗೇಂದ್ರಸ್ಯ
ಮುಖಂ ಯಸ್ಯ ಮಹಾತ್ಮನಃ ।
ತದಧಃ ಪೌರುಷಂ ರೂಪಂ ಸ
ದೇವಃ ಶುಭದೋಸ್ತು ವಃ ॥

ಯಾವ ಮಹಾತ್ಮನಿಗೆ ಗಜೇಂದ್ರನ (ಆನೆಯ) ಮತ್ತು ಮೃಗೇಂದ್ರನ (ಸಿಂಹದ) ಮುಖವಿದ್ದು ಮಾನವ ಶರೀರವಿದೆಯೋ ಆ ಪೌರುಷ ಮತ್ತು ದೀಪ್ತ ಸ್ವರೂಪ ದೇವರು ನಮ್ಮೆಲ್ಲರಿಗೆ ಶುಭವನ್ನು ಅನುಗ್ರಹಿಸಲಿ.

ಕೂಟಕ್ಷೇತ್ರಾಂತರೇ ಯಸ್ಮಿನ್
ಶಾಲಗ್ರಾಮ ಶಿಲಾತ್ಮನಾ
ವ್ಯಕ್ತಿಭೂತೋ ನೃಸಿಂಹಸ್ತಚ್ಛಾಲ
ಗ್ರಾಮಸ್ಥಲಂ ವಿದುಃ ॥



ಲಂಡನಿನ ಲೊರ್ಡ್ ಮೇಯರರಾಗಿ, ಸರ್ ಫ್ರೆಡ್ರಿಕ್ ಹೋರ್‌ರವರು ಇದೇ ತಾ 11—11—61ರಲ್ಲಿ ಚಾರ್ಜುವಹಿಸಲಿರುವರು. ಇವರು ಕ್ರಿ. ಶ. 1712 ಮತ್ತು 1745—46 ಲಂಡನಿನ ಲೋರ್ಡ್ ಮೇಯರರ ಪೀಳಿಗೆಯವರು. ಮೇಲಿನ ಚಿತ್ರದಲ್ಲಿ, ಸರ್ ಫ್ರೆಡರಿಕ್‌ರವರು ಸ್ಯಂಟ್ ಜೊನ್ಸ್ ವುಡ್‌ನಲ್ಲಿರುವ ತಮ್ಮ ಮನೆಯ ತೋಟದಲ್ಲಿ ತಮ್ಮ ಪುತ್ರಿಯೊಡನೆ ಕುಳಿತಿರುವುದನ್ನು ಕಾಣಿಸಲಾಗಿದೆ.

ಕೂಟಕ್ಷೇತ್ರದ ಮಧ್ಯದಲ್ಲಿ ಸಾಲಿಗ್ರಾಮ ಶಿಲಾಮೂರ್ತಿ ಸ್ವರೂಪನಾಗಿ ಶ್ರೀನೃಸಿಂಹನು ಆವಿರ್ಭವಿಸಿರುವನು. ಆದ್ದರಿಂದ ಈ ಕ್ಷೇತ್ರವು ಸಾಲಿಗ್ರಾಮ ಕ್ಷೇತ್ರವೆಂದು ಕರೆಯಲ್ಪಟ್ಟಿದೆ. ಶ್ರೀನೃಸಿಂಹನು ಕೂಟಬ್ರಾಹ್ಮಣರ ಗುರುವಾಗಿರುವನು. ಆದರೂ ಅವರು ವೈಷ್ಣವರಲ್ಲ, ಶೈವರಲ್ಲ. ಅಖಂಡ ಸ್ಮಾರ್ತರಾಗಿದ್ದಾರೆ.

ಶ್ರೀನೃಸಿಂಹ ವಿಗ್ರಹವು ಗಣಪತಿ ಯಂತ್ರದ ಮೇಲೆ ಸ್ಥಾಪಿತವಾಗಿದೆ. ಆದ್ದರಿಂದಲೇ "ಗಜೇಂದ್ರಸ್ಯಮೃಗೇಂದ್ರಸ್ಯ" ಎಂದು ಮಾಹಾತ್ಮ್ಯೆಯು ಆರಂಭವಾಗಿದೆ. "ಕುಂಡರೂಪಮಿದಂ ಕ್ಷೇತ್ರಂ" ಈ ಕ್ಷೇತ್ರವೇ ಭಕ್ತರಾದ ಕೂಟಗ್ರಾಮಸ್ಥರಿಗೆ ಯಜ್ಞಕುಂಡವಾಗಿದೆ. ಯಜ್ಞಯಾಗಾದಿಗಳು ಚಿತ್ತಮಯಕಾರಕಗಳು ವಾಸಿಷ್ಠ ಸಂಹಿತೆಯಲ್ಲಿ ಹೇಳಿರುವ ಗಣಹೋಮವೇ ಶ್ರೀನೃಸಿಂಹ ಭಕ್ತರಿಗೆ ಸಿದ್ಧಿಪ್ರದವಾದ ಮಹಾಯಜ್ಞವಾಗಿದೆ.

ಭಾಗವತದ ಏಳನೇ ಸ್ಕಂಧದಲ್ಲಿಯೂ ನರಸಿಂಹ ಪುರಾಣದಲ್ಲಿಯೂ ಹಿರಣ್ಯಾಕ್ಷನನ್ನು ಸಂಹರಿಸಿ, ಭಕ್ತಾಗ್ರಣಿ ಪ್ರಹ್ಲಾದನನ್ನು ರಕ್ಷಿಸುವುದಕ್ಕಾಗಿ ನೃಸಿಂಹನು ಆವಿರ್ಭವಿಸಿದ ಕಥೆಯಿದೆ. ಆದರೆ, ಲಕ್ಷ್ಮೀಸಮೇತ ಅವಿರ್ಭವಿಸಿದ ವರ್ಣನೆ ಇರುವುದಿಲ್ಲ. ಶ್ರೀ ಸಾಲಿಗ್ರಾಮ ಕ್ಷೇತ್ರ ಮಾಹಾತ್ಮ್ಯೆಯಲ್ಲಿಯೂ ನಿರೂಪಿಸಲ್ಪಟ್ಟಿರುವುದಿಲ್ಲ. ಯೋಗಾನಂದ ನೃಸಿಂಹಾಖ್ಯಂ ಯೋಗಸ್ಥಿತಿಯಲ್ಲಿ ಮೂರ್ತಿ ಇರುವುದರಿಂದಲೂ ಲಕ್ಷ್ಮಿಯ ಆವಾಹನೆ ಇರುವುದಿಲ್ಲ. ಪ್ರತಿಯೊಂದು ದೇವಾಲಯದಲ್ಲಿ ಸ್ಥಾಪಿಸಲ್ಪಡುವ ಮೂರ್ತಿಯನ್ನು ವರ್ಣಿಸುವ ಮಂತ್ರವೇ ಧ್ಯಾನ ಮಂತ್ರವಾಗಿದೆ. ಶ್ರೀನೃಸಿಂಹನಿಗೆ ತಂತ್ರ ಶಾಸ್ತ್ರಗಳಲ್ಲಿ ಅನೇಕ ಧ್ಯಾನ ಶ್ಲೋಕಗಳನ್ನು ಕೊಟ್ಟಿದ್ದಾರೆ. ಆದರೆ ಪ್ರಾಚೀನ ಕಾಲದಿಂದಲೂ ಶ್ರೀನೃಸಿಂಹನನ್ನು ಮಾಹಾತ್ಮ್ಯೆಯಲ್ಲಿ ಕೊಟ್ಟಿರುವ ಈ ಧ್ಯಾನ ಶ್ಲೋಕಗಳಿಂದಲೇ ಆಹ್ವಾನ ಮಾಡುತ್ತಿದ್ದಾರೆ. ಆದ್ದರಿಂದ ಪ್ರತಿಯೊಬ್ಬ ಭಜಕನೂ ಧ್ಯಾನಶ್ಲೋಕಗಳಿಂದ ಈ ಶ್ರೀನೃಸಿಂಹನನ್ನು ಧ್ಯಾನಮಾಡಬೇಕೆಂದು ನಮ್ಮ ಅಪೇಕ್ಷೆ.

ಸಾಕ್ಷಾದ್ಬ್ರಹ್ಮಹರೀಶಚಿಹ್ನವಪುಷಾ
ದೀಪ್ತ ತ್ರಿಮೂರ್ತ್ಯಾತ್ಮನೇ ।
ನಿರ್ವೈರ ಸ್ಥಲವೀರ್ಯ ದೃಷ್ಟಮುಖತಃ
ಸಿಂಹದ್ವಿಪಾಸ್ಯಶ್ರಿಯೇ ॥
ಕಂಠಾಧಃ ಸ್ಫುಟದೃಶ್ಯಮಾನ
ನೃಶರೀರೈಕ್ಯಾಯ ಸರ್ವಾತ್ಮನೇ ।
ಲೋಕಾನುಗ್ರಹ ವಸ್ತುನೇ ಸ್ತು
ಮಹಸೇ ತಸ್ಮೈ ಪರಸ್ಮೈ ನಮಃ ॥

ಸ್ವಪ್ನದಲ್ಲಿ ಭಟ್ಟಾಚಾರ್ಯರಿಗೆ ತನ್ನ ದರ್ಶನ ಪಡೆಯಬೇಕೆಂದು ಆಜ್ಞೆಯಾದ ಶ್ರೀಸಾಲಿಗ್ರಾಮ ಕ್ಷೇತ್ರ ಎಂಬ ಈ ನಿರ್ವೈರ ಕ್ಷೇತ್ರದಲ್ಲಿ ನೆಲಸಿರುವ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರೆಂಬ ತ್ರಿಮೂರ್ತಿಗಳ ರೂಪನಾದ, ಸಿಂಹ ಮತ್ತು ಆನೆಯ ಇವೆರಡರ ಮುಖಗಳ ಕಾಂತಿಯಿರುವ, ಮತ್ತು ಕುತ್ತಿಗೆಯ ಕೆಳಭಾಗವು ಸ್ಪಷ್ಟವಾಗಿ ಮಾನವಶರೀರವಾಗಿಯೂ, ಚರಾಚರಾತ್ಮಕನೂ ಲೋಕಾನುಗ್ರಹನೂ ಆಗಿರುವ ಪರಮಾತ್ಮಸ್ವರೂಪನಾದ ನೃಸಿಂಹನಿಗೆ ನಮ್ಮ ನಮಸ್ಕಾರ. —— [ಸಶೇಷ]

Printed at The Prabhat Printers, Ltd., Mangalore and Edited & Published at Prabhat Office, Car Street, Mangalore by K.V.Shenoy.